ಕರ್ನಾಟಕ ವಿಧಾನ ಸಭೆ
ಸೋಮವಾರ 1ನೇ ಮಾರ್ಚ್, 2010ರಂದು
ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು. ಅಧ್ಯಕ್ಷರಾದ ಶ್ರೀ ಕೆ.ಜಿ. ಬೋಪಯ್ಯರವರು ಪೀಠದಲ್ಲಿ ಉಪಸ್ಥಿತರಿದ್ದರು.

1. ಸಂತಾಪ ಸೂಚನೆ :
ಶ್ರೀ ಜ್ಯೋತಿಬಸು, ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿಗಳು ಮತ್ತು ಇತರರ ನಿಧನದ ಬಗ್ಗೆ.

ಸಭಾಧ್ಯಕ್ಷರು : ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿಯಾಗಿದ್ದ ಶ್ರೀ ಜ್ಯೋತಿಬಸು, ವಿಧಾನಸಭೆಯ ಮಾಜಿ ಸದಸ್ಯರುಗಳಾಗಿದ್ದ ಶ್ರೀ ಶಂಕರಶೆಟ್ಟಿ ಪಾಟೀಲ್, ಶ್ರೀ ಶಿವಶೇಖರಪ್ಪಗೌಡ ಶಿರವಾಳ್, ಮಾಜಿ ಸಂಸದರಾಗಿದ್ದ ಶ್ರೀ ಬಿ.ಪಿ. ಕದಂ, ಕನ್ನಡ ಚಲನಚಿತ್ರದ ಪೋಷಕ ನಟರಾಗಿದ್ದ ಶ್ರೀ ಕೆ.ಎಸ್. ಅಶ್ವಥ್ ಮತ್ತು ರಂಗಭೂಮಿ ನಟಿಯಾಗಿದ್ದ ಶ್ರೀಮತಿ ಚಿಂದೋಡಿ ಲೀಲಾ ಹಾಗೂ ಖ್ಯಾತ ಪತ್ರಕರ್ತರಾಗಿದ್ದ ಶ್ರೀ ಬಿ.ವಿ. ವೈಕುಂಠರಾಜು ಅವರುಗಳು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

1. ಶ್ರೀ ಜ್ಯೋತಿಬಸು

ಶ್ರೀ ಜ್ಯೋತಿಬಸು ಅವರು 1914ರಲ್ಲಿ ಕೋಲ್ಕತ್ತಾದಲ್ಲಿ ಜನಿಸಿದ್ದು, ಕಾನೂನು ಪದವೀಧರರಾಗಿದ್ದರು. ಶ್ರೀಯುತರು ಭಾರತೀಯ ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿ ಪೂರ್ಣವಾಗಿ ತೊಡಗಿಸಿಕೊಂಡು, ಕಾರ್ಮಿಕ ಸಂಘಟನೆಗಾಗಿ ಶ್ರಮಿಸಿದ್ದರು. 1946ರಲ್ಲಿ ಮೊದಲ ಬಾರಿಗೆ ವಿಧಾನಸಭೆಗೆ ಪ್ರವೇಶಿಸಿದ ಶ್ರೀಯುತರು ಸತತವಾಗಿ ಹತ್ತು ಬಾರಿ ಪಶ್ಚಿಮ ಬಂಗಾಳ ವಿಧಾನಸಭೆಯ ಸದಸ್ಯರಾಗಿದ್ದರು. 1969ರಲ್ಲಿ ಉಪ ಮುಖ್ಯಮಂತ್ರಿಯಾಗಿ ಹಾಗೂ 1977ರಿಂದ ಸತತವಾಗಿ 23 ವರ್ಷಗಳ ಸುದೀರ್ಘ ಅವಧಿಗೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿ 6.11.2000ರಂದು ಮುಖ್ಯಮಂತ್ರಿ ಹುದ್ದೆಯನ್ನು ಸ್ವಯಂ ಪ್ರೇರಿತವಾಗಿ ತ್ಯಜಿಸಿದ ಧೀಮಂತ

ನಾಯಕರಾಗಿದ್ದರು. ದಿವಂಗತರು 2006ರಲ್ಲಿ ರಾಜಕೀಯದಿಂದಲೇ ನಿವೃತ್ತಿ ಹೊಂದಿದ್ದರು.

ಶ್ರೀಯುತರು ದಿನಾಂಕ 17.01.2010ರಂದು ನಿಧನ ಹೊಂದಿದರು.

2. ಶ್ರೀ ಶಂಕರಶೆಟ್ಟಿ ಪಾಟೀಲ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಶಂಕರಶೆಟ್ಟಿ ಪಾಟೀಲ್ ಅವರು 1913ರಲ್ಲಿ ಗುಲ್ಬರ್ಗಾ ಜಿಲ್ಲೆ ಕಮಲಾಪುರದಲ್ಲಿ ಜನಿಸಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು. ಶ್ರೀಯುತರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದರಲ್ಲದೆ, ಕಮಲಾಪುರದ ಗಾಂಧಿ ಎಂದೇ ಹೆಸರುವಾಸಿಯಾಗಿದ್ದರು. ಶ್ರೀಯುತರು ಎರಡನೇ ಸಾರ್ವತ್ರಿಕ ಚುನಾವಣೆಯಲ್ಲಿ ಕಾಳಗಿ ಕ್ಷೇತ್ರದಿಂದ ಮೈಸೂರು ವಿಧಾನಸಭೆಗೆ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ: 28.01.2010ರಂದು ನಿಧನ ಹೊಂದಿದರು.

3. ಶ್ರೀ ಶಿವಶೇಖರಪ್ಪಗೌಡ ಶಿರವಾಳ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಶಿವಶೇಖರಪ್ಪಗೌಡ ಶಿರವಾಳ್ ಅವರು 1942ರಲ್ಲಿ ಜನಿಸಿದ್ದು, ಹೈಯರ್ ಸೆಕೆಂಡರಿಯವರೆಗೆ ವ್ಯಾಸಂಗ ಮಾಡಿದ್ದರಲ್ಲದೆ ವೃತ್ತಿಯಲ್ಲಿ ಕೃಷಿಕರಾಗಿದ್ದರು. ಶ್ರೀಯುತರು ಎಂಟು, ಒಂಭತ್ತು ಹಾಗೂ ಹನ್ನೊಂದನೇ ವಿಧಾನಸಭೆಗೆ ಶಹಾಪುರ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ: 16.02.2010ರಂದು ನಿಧನ ಹೊಂದಿದರು.

4. ಶ್ರೀ ಬಿ.ಪಿ. ಕದಂ

ವಿಧಾನಸಭೆಯ ಮಾಜಿ ಉಪಸಭಾಧ್ಯಕ್ಷರು ಹಾಗೂ ಮಾಜಿ ಸಂಸದರಾಗಿದ್ದ ಶ್ರೀ ಬಿ.ಪಿ. ಕದಂ ಅವರು 1922ರಲ್ಲಿ ಕಾರವಾರದ ಸದಾಶಿವಗಡದಲ್ಲಿ ಜನಿಸಿದ್ದರು. ಕಾನೂನು ಪದವೀಧರರಾಗಿದ್ದ ಶ್ರೀಯುತರು ವೃತ್ತಿಯಲ್ಲಿ ವಕೀಲರಾಗಿದ್ದರು. ಹಲವಾರು ಶಿಕ್ಷಣ ಸಂಸ್ಥೆ ಹಾಗೂ ಸಂಘ ಸಂಸ್ಥೆಗಳನ್ನು ಸ್ಥಾಪಿಸಿದ್ದರು, 1952ರಲ್ಲಿ ಬಾಂಬೆ ವಿಧಾನಸಭೆಗೆ ಚುನಾಯಿತರಾಗಿದ್ದರಲ್ಲದೆ ರಾಜ್ಯಗಳ ಪುನರ್‌ವಿಂಗಡಣೆ ನಂತರ 1962, 1967 ಹಾಗೂ 1972ರಲ್ಲಿ ಕರ್ನಾಟಕ ವಿಧಾನಸಭೆಗೆ ಆಯ್ಕೆಯಾಗಿದ್ದರಲ್ಲದೆ 1972 ರಿಂದ 1977ರವರೆಗೆ ವಿಧಾನಸಭೆಯ ಉಪಸಭಾಧ್ಯಕ್ಷರಾಗಿ

ಕಾರ್ಯನಿರ್ವಹಿಸಿರುತ್ತಾರೆ. 1977ರಲ್ಲಿ ಕೆನರಾ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 18.02.2010ರಂದು ನಿಧನ ಹೊಂದಿದರು.

5. ಶ್ರೀ ಕೆ.ಎಸ್. ಅಶ್ವಥ್

ಶ್ರೀ ಕೆ.ಎಸ್. ಅಶ್ವಥ್ ಅವರು 1925ರಲ್ಲಿ ಜನಿಸಿದ್ದರು ಶ್ರೀಯುತರು ಚಿತ್ರರಂಗದಲ್ಲಿ ಹಿರಿಯನಟರಾಗಿದ್ದರಲ್ಲದೆ ನಾಗರಹಾವು ಚಿತ್ರದ ಮೂಲಕ ಚಾಮಯ್ಯ ಮೇಷ್ಟ್ರು ಎಂದೇ ಖ್ಯಾತಿಯನ್ನು ಪಡೆದಿದ್ದರು. ದಿವಂಗತರು 1942ರ ಸ್ವಾತಂತ್ರ್ಯ ಸಂಗ್ರಾಮದಲ್ಲೂ ಸಹ ಪಾಲ್ಗೊಂಡಿರುತ್ತಾರೆ. ಶ್ರೀಯುತರು 1955ರಲ್ಲಿ ತೆರೆಕಂಡ "ಸ್ತ್ರೀರತ್ನ" ಚಿತ್ರದಲ್ಲಿ ನಾಯಕನಾಗಿ ಅಭಿನಯಿಸುವ ಮೂಲಕ ಕನ್ನಡ ಚಿತ್ರರಂಗವನ್ನು ಪ್ರವೇಶಿಸಿ, ಸುಮಾರು 371 ಚಿತ್ರಗಳಲ್ಲಿ ನಟಿಸಿ ಪ್ರಬುದ್ಧ ಹಾಗೂ ಉತ್ತಮ ಪೋಷಕ ನಟರಾಗಿದ್ದುಕೊಂಡೇ 1994ರಲ್ಲಿ ಚಿತ್ರರಂಗಕ್ಕೆ ದಿಢೀರನೆ ನಿವೃತ್ತಿಯನ್ನು ಘೋಷಿಸಿದ್ದರು. ಚಿತ್ರರಂಗದಲ್ಲಿನ ಇವರ ಸೇವೆಗೆ ತುಮಕೂರು ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ನೀಡಿ ಗೌರವಿಸಿತ್ತು. ಶ್ರೀ ಅಶ್ವಥ್ ಅವರು ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿರುತ್ತಾರೆ.

ಶ್ರೀಯುತರು ದಿನಾಂಕ 18.01.2010ರಂದು ನಿಧನ ಹೊಂದಿದರು.

6. ಶ್ರೀಮತಿ ಚಿಂದೋಡಿ ಲೀಲಾ

ದಾವಣಗೆರೆಯವರಾದ ಚಿಂದೋಡಿ ಶಾಂತಮ್ಮ ಮತ್ತು ವೀರಪ್ಪ ಅವರ 9ನೇ ಪುತ್ರಿಯಾಗಿ ಜನಿಸಿದ ರಂಗನಾಯಕಿ ಚಿಂದೋಡಿ ಲೀಲಾ ಅವರು ತಮ್ಮ ಐದನೇ ವಯಸ್ಸಿನಲ್ಲಿ ಬಾಲ ಸಿದ್ಧರಾಮೇಶ್ವರ ಪಾತ್ರದ ಮೂಲಕ ರಂಗಪ್ರವೇಶಿಸಿ, 14ನೇ ವಯಸ್ಸಿನಲ್ಲಿ ನಾಯಕಿ ಪಾತ್ರದ ಮೂಲಕ ರಂಗನಾಯಕಿಯಾಗಿ ಹೆಸರುವಾಸಿಯಾಗಿದ್ದರು. ಇವರು ಅಭಿನಯಿಸಿದ ಪೊಲೀಸನ ಮಗಳು, ಹಳ್ಳಿ ಹುಡುಗಿ ವಿಶ್ವದಾಖಲೆ ನಿರ್ಮಿಸಿದ ನಾಟಕಗಳಾಗಿದ್ದವು. ಇವರು ರಾಜ್ಯೋತ್ಸವ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಮತ್ತು ಗುಬ್ಬಿ ವೀರಣ್ಣ ಪ್ರಶಸ್ತಿಗೆ ಭಾಜನರಾಗಿರುತ್ತಾರೆ. ಅಲ್ಲದೆ ತಮ್ಮ ಉಸಿರಿರುವವರೆಗೆ ರಂಗಭೂಮಿ ಕಲಾವಿದರಾಗಿದ್ದರು.

ಶ್ರೀಮತಿ ಚಿಂದೋಡಿ ಲೀಲಾ ಅವರು ದಿನಾಂಕ 21.01.2010ರಂದು ನಿಧನ ಹೊಂದಿದರು.

7. ಶ್ರೀ ಬಿ.ವಿ. ವೈಕುಂಠರಾಜು

ಖ್ಯಾತ ಪತ್ರಕರ್ತರಾಗಿದ್ದ ಶ್ರೀ ಬಿ.ವಿ. ವೈಕುಂಠರಾಜು ಅವರು ಚಿತ್ರದುರ್ಗ ನಗರದ ಗುಡ್ಡದ ರಂಗವ್ವನಹಳ್ಳಿಯಲ್ಲಿ 1937ರಲ್ಲಿ ಜನಿಸಿದ್ದರು, ಶ್ರೀಯುತರು ಸ್ನಾತಕೋತ್ತರ ಪದವಿಯನ್ನು ಪಡೆದು ಉಪನ್ಯಾಸಕರಾಗಿ ಸೇವೆ ಆರಂಭಿಸಿ ನಂತರ ಹಿರಿಯ ಪತ್ರಕರ್ತ ಪಿ. ಲಂಕೇಶ್ ಅವರ ಸಮಕಾಲೀನರವರಾಗಿದ್ದ ಶ್ರೀ ವೈಕುಂಠರಾಜು ಅವರು ತಾಯ್ನಾಡು ಪತ್ರಿಕೆಯ ಮೂಲಕ ಪತ್ರಿಕಾ ರಂಗಕ್ಕೆ ಪ್ರವೇಶಿಸಿದ್ದರು. ಪ್ರಜಾವಣಿಯಲ್ಲಿ ಸಹಾಯಕ ಸಂಪಾದಕರಾಗಿ ಸೇವೆ ಸಲ್ಲಿಸಿದ್ದರಲ್ಲದೆ, ಅಲ್ಲಿಂದ ಹೊರಬಂದು ವಾರಪತ್ರಿಕೆಯನ್ನು ಆರಂಭಿಸಿದ್ದರು. ಶ್ರೀಯುತರು ವಾರಪತ್ರಿಕೆಯಲ್ಲಿ "ಸಂಪಾದಕರ ಡೈರಿ" ಮತ್ತು ವಿಜಯಕರ್ನಾಟಕದಲ್ಲಿ "ಸಾಂಸ್ಕೃತಿಕ ಲೋಕ ಅಂಕಣ' ಬರೆಯುವುದರ ಮೂಲಕ ಒದುಗರ ಮನ ಗೆದ್ದಿದ್ದರು. ಶ್ರೀಯುತರು 30ಕ್ಕೂ ಹೆಚ್ಚು ಪುಸ್ತಕಗಳು ಹಾಗೂ "ವಾರ್ಡ್ ನಂಬರ್ 220" ಕಾದಂಬರಿಯನ್ನು ಬರೆದಿದ್ದು, ಸಾಹಿತ್ಯದ ಬಗ್ಗೆ ಅಪಾರ ಅನುಭವವನ್ನು ಹೊಂದಿದ್ದರು. ಕರ್ನಾಟಕ ನಾಟಕ ಅಕಾಡೆಮಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುತ್ತಾರೆ. ರಾಜ್ಯ ಪ್ರಶಸ್ತಿ, ನಾಟಕ ಅಕಾಡೆಮಿ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳು ಇವರನ್ನು ಅರಸಿ ಬಂದಿವೆ.

ಶ್ರೀಯುತರು ದಿನಾಂಕ 30.01.2010ರಂದು ನಿಧನ ಹೊಂದಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು): ಮಾನ್ಯ ಅಧ್ಯಕ್ಷರೆ, ತಾವು ತಂದಿರುವಂಥ ಸಂತಾಪ ಸೂಚನೆಗೆ ಧ್ವನಿಗೂಡಿಸುತ್ತಾ, ಪಶ್ಚಿಮಬಂಗಾಳದ ಮಾಜಿ ಮುಖ್ಯಮಂತ್ರಿಯಾಗಿದ್ದಂಥ ಶ್ರೀ ಜ್ಯೋತಿಬಸು, ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದಂಥ ಶ್ರೀ ಶಂಕರಶೆಟ್ಟಿ ಪಾಟೀಲ್, ಶ್ರೀ ಶಿವಶೇಖರಪ್ಪಗೌಡ ಶಿರವಾಳ್, ಮಾಜಿ ಸಂಸದರಾಗಿದ್ದಂಥ ಶ್ರೀ ಬಿ.ಪಿ. ಕದಂ, ಕನ್ನಡ ಚಲನಚಿತ್ರ ರಂಗದ ಪೋಷಕ ನಟರಾಗಿದ್ದಂಥ ಶ್ರೀ ಕೆ.ಎಸ್. ಅಶ್ವಥ್‌ರವರು, ರಂಗಭೂಮಿ ನಟಿಯಾಗಿದ್ದಂಥ ಶ್ರೀಮತಿ ಚಿಂದೋಡಿ ಲೀಲಾ, ಖ್ಯಾತ ಪತ್ರಕರ್ತರಾದಂಥ ಶ್ರೀ ಬಿ.ವಿ. ವೈಕುಂಠರಾಜುರವರ ನಿಧನದಿಂದ ಈ ನಾಡು ಬಡವಾಗಿದೆ. ಬಹುಶಃ ಸ್ವತಂತ್ರ್ಯ ಭಾರತದ ಇತಿಹಾಸದಲ್ಲಿ ದಿವಂಗದ ಜ್ಯೋತಿ

ಬಸುರವರನ್ನು ಮರೆಯುವುದಕ್ಕೆ ಸಾಧ್ಯವಿಲ್ಲ. ಕಾನೂನು ಪದವೀಧರರಾಗಿ, ಕಮ್ಯೂನಿಸ್ಟ್ ಪಕ್ಷದ ಸದಸ್ಯರಾಗಿ, ಕಾರ್ಮಿಕ ನಾಯಕರಾಗಿ, 1946ರಲ್ಲಿ ಮೊದಲ ಬಾರಿಗೆ ವಿಧಾನ ಸಭೆಯನ್ನು ಪ್ರವೇಶ ಮಾಡಿ ಹತ್ತು ಬಾರಿ ಪಶ್ಚಿಮ ಬಂಗಾಳದ ವಿಧಾನ ಸಭೆಯ ಸದಸ್ಯರಾಗಿ 1969ರಿಂದ ಉಪ ಮುಖ್ಯಮಂತ್ರಿಯಾಗಿ, 1977ರಿಂದ ಸತತವಾಗಿ 23 ವರ್ಷ ಸುದೀರ್ಘವಾಗಿ ಮುಖ್ಯಮಂತ್ರಿ ಸ್ಥಾನದಲ್ಲಿ ಇದ್ದು 6.11.2001 ರಂದು ಮುಖ್ಯಮಂತ್ರಿಯ ಹುದ್ದೆಯನ್ನು ಸ್ವಯಂಪ್ರೇರಿತರಾಗಿ ತ್ಯಜಿಸಿದ್ದಾರೆ. ಇದು ಒಂದು ದಾಖಲೆ. ಹತ್ತು ಬಾರಿ ವಿಧಾನ ಸಭೆಯ ಸದಸ್ಯರಾಗಿದ್ದಂಥದ್ದು ಮತ್ತೊಂದು 23 ವರ್ಷ ಸುದೀರ್ಘವಾಗಿ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿ ತಾವೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಮತ್ತೊಬ್ಬರಿಗೆ ಅವಕಾಶ ಮಾಡಿಕೊಟ್ಟಂಥ ಅಪರೂಪದ ವ್ಯಕ್ತಿ. ಅವರನ್ನು ಕಳೆದುಕೊಂಡು ಕೇವಲ ಪಶ್ಚಿಮ ಬಂಗಾಳವಲ್ಲ ಇಡೀ ದೇಶವೆ ತಬ್ಬಲಿಯಾಗಿದೆ. ಈ ರೀತಿಯ ಪ್ರಾಮಾಣಿಕ, ನಾಡಿನ ಅಭಿವೃದ್ಧಿಗಾಗಿ ಕೆಲಸ ಮಾಡಿರತಕ್ಕವರು ಅತ್ಯಂತ ವಿರಳ. ನಾಡಿನ ಸರ್ವಾಂಗೀಣ ಅಭಿವೃದ್ಧಿಗಾಗಿ ಕೆಲಸ ಮಾಡಿ, ಆ ರಾಜ್ಯದ ಜನರ ಪ್ರೀತಿ ವಿಶ್ವಾಸವನ್ನು ಗಳಿಸಿಕೊಳ್ಳುವಂಥದ್ದು ಸಾಧಾರಣವಾದ ವಿಷಯವಲ್ಲ. ಬಹುಶ: ಒಂದು ರೀತಿಯಲ್ಲಿ ಅನೇಕ ರಾಜ್ಯದ ಮುಖಂಡರುಗಳಿಗೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದರು. ಪ್ರಾಮಾಣಿಕವಾಗಿ ಕೆಲಸ ಮಾಡಿದರು. ಕಾರ್ಮಿಕರುಗಳಿಗಾಗಿ ದುಡಿದರು. ಅಂಥ ವ್ಯಕ್ತಿಯನ್ನು ಕಳೆದುಕೊಂಡು ಈ ದೇಶವೇ ಬಡವಾಗಿದೆಯೆಂದು ಹೇಳಲು ಇಚ್ಛೆ ಪಡುತ್ತೇನೆ.

ಶ್ರೀ ಶಂಕರಶೆಟ್ಟಿ ಪಾಟೀಲ್‌ರವರು, 1913 ರಲ್ಲಿ ಗುಲ್ಬರ್ಗಾ ಜಿಲ್ಲೆಯ ಕಮಲಾಪುರದಲ್ಲಿ ಜನಿಸಿದ್ದು, ಎರಡನೇ ಸಾರ್ವತ್ರಿಕ ಚುನಾವಣೆಯಲ್ಲಿ ಕಾಳಗಿ ಕ್ಷೇತ್ರದಿಂದ ಮೈಸೂರು ವಿಧಾನ ಸಭೆಗೆ ಚುನಾಯಿತರಾಗಿ ಸೇವೆ ಸಲ್ಲಿಸಿದ್ದಂಥವರು.

ಅದೇ ರೀತಿ, ಶ್ರೀ ಶಿವಶೇಖರಪ್ಪಗೌಡ ಶಿರವಾಳ್‌ರವರು, 9 ಮತ್ತು 11 ನೇ ವಿಧಾನ ಸಭೆಗೆ ಶಹಾಪುರ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ವಿಧಾನ ಸಭೆಯ ಮಾಜಿ ಉಪಾಸಭಾಧ್ಯಕ್ಷರಾಗಿ, ಶ್ರೀ ಬಿ.ಪಿ. ಕದಂರವರು ಅನೇಕ ಬಾರಿ ವಿಧಾನ ಸಭೆಗೆ ಆಯ್ಕೆಯಾಗಿ,

ವಿಧಾನ ಸಭೆಯ ಉಪಾಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿ, ಕೆನರಾ ಲೋಕಸಭಾ ಕ್ಷೇತ್ರದಿಂದ ಒಂದು ಬಾರಿ ಲೋಕಸಭೆಗೆ ಆಯ್ಕೆಯಾಗಿದ್ದಂಥ ಹಿರಿಯ ವ್ಯಕ್ತಿ ಅವರು.

ಇನ್ನು ಶ್ರೀ ಕೆ.ಎಸ್. ಅಶ್ವಥ್‌ರವರನ್ನು ನಾವು ಯಾರೂ ಮರೆಯುವುದಕ್ಕೆ ಆಗುವುದಿಲ್ಲ. ಚಿತ್ರರಂಗದಲ್ಲಿ ಅವರು ತಮ್ಮದೇ ಆದಂಥ ಸಾಧನೆಯನ್ನು ಮಾಡಿದಂಥವರು. ಸುಮಾರು 371 ಚಿತ್ರಗಳಲ್ಲಿ ನಟಿಸಿ ಉತ್ತಮ ಪೋಷಕ ನಟರಾಗಿ ಇದ್ದುಕೊಂಡು ಚಿತ್ರರಂಗಕ್ಕೆ ಒಂದು ದೊಡ್ಡ ಕೊಡುಗೆಯನ್ನು ಕೊಟ್ಟಂಥ ಅಶ್ವತ್‌ರವರನ್ನು ಕಳೆದುಕೊಂಡು ಈ ನಾಡು ಬಡವಾಗಿದೆ.

ಅದೇ ರೀತಿ ಶ್ರೀಮತಿ ಚಿಂದೋಡಿ ಲೀಲಾರವರು ಚಿಕ್ಕ ವಯಸ್ಸಿನಲ್ಲೆ ತಮ್ಮ ಪ್ರತಿಭೆಯನ್ನು ತೋರಿಸಿ, ರಂಗನಾಯಕಿ ಚಿಂದೋಡಿ ಲೀಲಾ ಎಂದು ಹೆಸರನ್ನು ಪಡೆದು ಅನೇಕ ಪ್ರಮುಖ ಪಾತ್ರಗಳಲ್ಲಿ ಜೀವಕಳೆಯನ್ನು ತುಂಬಿ 14ನೇ ವಯಸ್ಸಿನಲ್ಲೇ ನಾಯಕಿ ಪಾತ್ರದ ಮೂಲಕ ರಂಗನಾಯಕಿಯಾಗಿ ಹೆಸರುವಾಸಿ ಪಡೆದಿದ್ದಂಥ, ರಾಜ್ಯೋತ್ಸವ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಈ ರೀತಿ ಅನೇಕ ಪ್ರಶಸ್ತಿ, ಬಿರುದುಗಳನ್ನು ಪಡೆದಂಥವರು ಶ್ರೀಮತಿ ಚಿಂದೋಡಿ ಲೀಲಾರವರು. ಅವರನ್ನು ನಾವು ಈಗ ಕಳೆದುಕೊಂಡಿದ್ದೇವೆ.

ಶ್ರೀ ಬಿ.ವಿ. ವೈಕುಂಠರಾಜುರವರು, ವಾರಪತ್ರಿಕೆಯಲ್ಲಿ ಸಂಪಾದಕ ಡೈರಿ ಮತ್ತು ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಸಾಂಸ್ಕೃತಿಕಲೋಕ ಅಂಕಣವನ್ನು ಬರೆದು ಪತ್ರಿಕಾ ಕ್ಷೇತ್ರದಲ್ಲಿ ಬಹಳ ದೊಡ್ಡ ಸಾಧನೆಯನ್ನು ಮಾಡಿದ್ದರು. ಅವರ ಉತ್ತಮವಾದ ಲೇಖನಗಳನ್ನು ನಾವು ಇವತ್ತಿಗೂ ನೆನಪು ಮಾಡಿಕೊಳ್ಳಬೇಕಾಗಿದೆ. ಅಂಥ ಒಳ್ಳೊಳ್ಳೆಯ ಲೇಖನಗಳನ್ನು ಬರೆದು ನಾಡಿನಲ್ಲಿ ಜಾಗ್ರತೆಯನ್ನು ಮೂಡಿಸುವಂಥ, ರಾಜಕೀಯ ಕ್ಷೇತ್ರದಲ್ಲಿರುವವರಿಗೆ ಪ್ರೇರಣೆಯನ್ನು ಕೊಡುವಂಥ ಅನೇಕ ಲೇಖನಗಳನ್ನು ಬರೆದಂಥ ಬಿ.ವಿ. ವೈಕುಂಠರಾಜುರವರನ್ನು ನಾವು ಕಳೆದುಕೊಂಡಿದ್ದೇವೆ. ಇವರೆಲ್ಲರ ಆತ್ಮಕ್ಕೆ ಶಾಂತಿಯನ್ನು ಕೋರಿ ಅವರ ಬಂಧುಬಳಗದವರಿಗೆ ಅವರ ಅಗಲಿಕೆಯ ನೋವನ್ನು ತಡೆಯುವ ಶಕ್ತಿಯನ್ನು ಆ ದೇವರು ಕೊಡಲಿಯೆಂದು ಭಗವಂತನಲ್ಲಿ ಪ್ರಾರ್ಥಿಸಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನೀವು ತಂದಿರತಕ್ಕಂಥ ಸಂತಾಪ ಸೂಚನೆ ನಿರ್ಣಯವನ್ನು ನಾನೂ ಕೂಡ ಬೆಂಬಲಿಸಿ, ಇವತ್ತು ಜ್ಯೋತಿಬಸುರವರು ಈ ರಾಷ್ಟ್ರ ಕಂಡಂಥ ಒಬ್ಬ ಶ್ರೇಷ್ಠ ರಾಜಕಾರಣಿ. ಅವರು ನಮ್ಮನ್ನು ಅಗಲಿದ್ದಾರೆ. ಶ್ರೀ ಶಂಕರಶೆಟ್ಟಿ ಪಾಟೀಲರು ಈ ಮನೆಯ ಹಿರಿಯ ಸದಸ್ಯರಾಗಿದ್ದವರು, ಶ್ರೀ ಶಿವಶೇಖರಪ್ಪಗೌಡ ಶಿರವಾಳ್‌ರವರು ಕೂಡ ವಿಧಾನ ಸಭೆಯ ಸದಸ್ಯರಾಗಿ ಮೂರು ಬಾರಿ ಕೆಲಸ ಮಾಡಿದ್ದಾರೆ. ಕೆ.ಎಸ್. ಅಶ್ವಥ್‌ರವರು ಕನ್ನಡ ಚಿತ್ರರಂಗ ಕಂಡಂಥ ಅಪರೂಪದ ನಟರು. ಶ್ರೀಮತಿ ಚಿಂದೋಡಿ ಲೀಲಾ, ರಂಗಭೂಮಿ ಕಲಾವಿದೆ, ಶ್ರೀ ಬಿ.ವಿ.ವೈಕುಂಠರಾಜುರವರು ಒಬ್ಬ ಖ್ಯಾತ ಪತ್ರಕರ್ತ. ಇವರೆಲ್ಲರೂ ನಮ್ಮನ್ನು ಅಗಲಿದ್ದಾರೆ. ಜ್ಯೋತಿಬಸುರವರು, ಬಹಳ ದೀರ್ಘಕಾಲ ಬಂಗಾಳದ ರಾಜಕಾರಣದಲ್ಲಿ ಇದ್ದಂಥವರು. ಬಹುಶ: ಪಶ್ಚಿಮ ಬಂಗಾಳದಲ್ಲಿ ಇವರು ಮಾಡಿದಂಥ ಸೇವೆ, ಒಬ್ಬ ರಾಜಕಾರಣಿಯಾಗಿ, ಆ ರಾಜ್ಯದ ಮುಖ್ಯಮಂತ್ರಿಯಾಗಿ, ಮುತ್ಸದ್ಧಿ ರಾಜಕಾರಣಿಯಾಗಿ, ಬಂಗಾಳದ ಜನರ ಮನಸ್ಸಿನಲ್ಲಿ ಮಾತ್ರವಲ್ಲ ಭಾರತದ ಜನರ ಮನಸ್ಸಿನಲ್ಲೂ ಇವರ ನೆನಪು ಅಚ್ಚಳಿಯದೇ ಉಳಿದಿದೆಯೆಂದು ನಾನು ಭಾವಿಸುತ್ತೇನೆ. ಜ್ಯೋತಿಬಸುರವರನ್ನು ಬಂಗಾಳದವರು ಜ್ಯೋತಿಬಾಬು ಎಂದೇ ಕರೆಯುತ್ತಿದ್ದರು. ಇವರು ವಿದ್ಯಾರ್ಥಿಯಾಗಿದ್ದಾಗಲೇ ಎಡಪಂಥೀಯ ವಿಚಾರಧಾರೆಯಿಂದ ಆಕರ್ಷಿತರಾಗಿದ್ದಂಥವರು. ಇವರು ಲಂಡನ್‌ನಲ್ಲಿ ಓದಲು ಹೋಗಿದ್ದಾಗಲೇ ಎಡಪಂಥೀಯ ವಿಚಾರಗಳಿಂದ ಆಕರ್ಷಿತರಾಗಿ ಮುಂದೆ ಕಮ್ಯೂನಿಸ್ಟ್ ಪಕ್ಷವನ್ನು ಸೇರಿ ಸಕ್ರಿಯವಾಗಿ ಪಶ್ಚಿಮ ಬಂಗಾಳದಲ್ಲಿ ಈ ದೇಶದಲ್ಲಿ ಕಮ್ಯೂನಿಸ್ಟ್ ಪಕ್ಷ ಬೆಳೆಯುವುದಕ್ಕೆ, ಅಧಿಕಾರಕ್ಕೆ ಬರುವುದಕ್ಕೆ ಅಪಾರವಾದ ಕೊಡುಗೆಯನ್ನು ಕೊಟ್ಟಿದ್ದಾರೆ. ಬಹುಶ: ಭಾರತದ ಇತಿಹಾಸದಲ್ಲಿ ಯಾರೂ ಕೂಡ ಸತತವಾಗಿ 23 ವರ್ಷ ಮುಖ್ಯಮಂತ್ರಿಯಾಗಿರುವ ನಿದರ್ಶನ ಬೇರೆ ಯಾವುದೂ ಇಲ್ಲ. ಇವರು 1977ರಲ್ಲಿ ಮುಖ್ಯಮಂತ್ರಿಯಾಗಿ ಅವರೇ ಸ್ವತ: ಮುಖ್ಯಮಂತ್ರಿಯ ಸ್ಥಾನ ಬೇಡ ಎಂದು ಆ ಜವಾಬ್ದಾರಿಯನ್ನು ಬಿಟ್ಟುಬಿಡುತ್ತಾರೆ. ಅಲ್ಲಿಯವರೆಗೆ ಸತತವಾಗಿ 23 ವರ್ಷ ಒಂದು ರಾಜ್ಯದ ಮುಖ್ಯಮಂತ್ರಿಯಾಗಿರಬೇಕೆಂದರೆ, ಕಮ್ಯೂನಿಸ್ಟ್ ಪಕ್ಷವನ್ನು ಪ್ರತಿವರ್ಷವೂ ಚುನಾವಣೆಯಲ್ಲಿ ಗೆಲ್ಲಿಸುವ

ನಾಯಕತ್ವವನ್ನು ಹೊಂದಿದ್ದಾರೆಂದರೆ ಅವರು ಬಹಳ ಜನಪ್ರಿಯರಾಗಿರುವ ಮುಖ್ಯಮಂತ್ರಿ. ಜನರ ಮನಸ್ಸಿನಲ್ಲಿ ಅದರಲ್ಲೂ ವಿಶೇಷವಾಗಿ ಪಶ್ಚಿಮ ಬಂಗಾಳದಲ್ಲಿ ಅಧಿಕಾರ ವಿಕೇಂದ್ರೀಕರಣ ಮಾಡಿದರು. ಅದರಿಂದಾಗಿ ಕಮ್ಯೂನಿಸ್ಟ್ ಪಕ್ಷದ ಕಾರ್ಯಕರ್ತರು ಗಟ್ಟಿಯಾಗತಕ್ಕ ಕೆಲಸವನ್ನು ಅವರು ಮಾಡಿದರು. ಆದ್ದರಿಂದಲೇ ಗ್ರಾಮೀಣ ಪ್ರದೇಶದಲ್ಲಿ ಕಮ್ಯೂನಿಸ್ಟ್ ಪಕ್ಷ (C.P.I.M) ಬಹಳ ಬಲಿಷ್ಠವಾಗಿತ್ತು ಎಂಬುದನ್ನು ನಾವೆಲ್ಲಾ ಕೇಳಿದ್ದೇವೆ, ನೋಡಿದ್ದೇವೆ. ಬಹುಶ: ಅವರಿಂದಲೇ ಕಮ್ಯೂನಿಸ್ಟ್ ಪಕ್ಷ ಅಲ್ಲಿ ಅಷ್ಟೊಂದು ಬೇರು ಬಿಡಲು, ಇವತ್ತಿಗೂ ಅಲ್ಲಿ ಅದು ಗಟ್ಟಿಯಾಗಿದೆಯೆಂದರೆ ಜ್ಯೋತಿಬಸುರವರು ಆ ಕಮ್ಯೂನಿಸ್ಟ್ ಪಕ್ಷದ ಬೇರುಗಳನ್ನು ಗಟ್ಟಿ ಮಾಡಿದ ಕಾರಣಕ್ಕೋಸ್ಕರ ಎಂಬುದನ್ನು ಇವತ್ತು ನಾವೆಲ್ಲರೂ ನೆನಪು ಮಾಡಿಕೊಳ್ಳಬೇಕಾಗಿದೆ.

ಇವರಿಗೆ ಒಮ್ಮೆ 1996ರಲ್ಲಿ Prime Minister ಆಗತಕ್ಕಂಥ ಅವಕಾಶವೂ ಕೂಡ ಸಿಕ್ಕಿತ್ತು. Communist Party Politburo ಇವರನ್ನು Prime Minister ಮಾಡಲಿಕ್ಕೆ ಒಪ್ಪಿಕೊಂಡು ಬಿಟ್ಟಿದ್ದರೆ, ಮಾನ್ಯ ಜ್ಯೋತಿಬಸು ರವರೇ Prime Minister ಆಗುತ್ತಿದ್ದರು. ಅದರಿಂದಾಗಿ ಕರ್ನಾಟಕಕ್ಕೆ ಅವಕಾಶ ತಪ್ಪಿ ಹೋಗುತ್ತಿತ್ತು. ಅದು ಬೇರೆ ವಿಚಾರ. ಆದರೆ ಇವರಿಗೇ ಮೊದಲ Prime offer ಇತ್ತು. 1996ರಲ್ಲಿ ನಾನೂ ಕೂಡ ದೆಹಲಿಯಲ್ಲಿದ್ದೆ. ನೀವು ಒಪ್ಪಿಕೊಳ್ಳಿ ಎಂದು ಹೇಳಲು ಮಾನ್ಯ ಜ್ಯೋತಿಬಸುರವರ ಮನೆಗೂ ಕೂಡ ನಾನು ಹೋಗಿದ್ದೆ, ಮಾನ್ಯ ಜ್ಯೋತಿಬಸುರವರು ಒಪ್ಪಿಕೊಂಡಿದ್ದರು. ಆದರೆ ಅವರ Politburo ಒಪ್ಪಲಿಲ್ಲ. First offer was made to him. ಅವತ್ತು ಅವರ ಪಕ್ಷದ Politburo ಒಪ್ಪಿಕೊಂಡುಬಿಟ್ಟಿದ್ದರೆ, ಬಹುಶಃ ಈ ದೇಶದಲ್ಲಿ ಕಮ್ಯುನಿಸ್ಟ್ ಪಕ್ಷದ ಮೊದಲನೇ ಪ್ರಧಾನ ಮಂತ್ರಿ ಆಗತಕ್ಕಂಥ ಅವಕಾಶ ಅವರಿಗೆ ಸಿಗುತ್ತಿತ್ತು. ಅದನ್ನು ಕಮ್ಯೂನಿಸ್ಟ್ ಪಕ್ಷದವರು ಕಳೆದುಕೊಂಡರು, ಅದು ಬೇರೆ ವಿಚಾರ, Coalition Government ನಲ್ಲಿ ಏನೇನೋ ಆಗುತ್ತದೆಂಬ ಕಾರಣಕ್ಕೆ ನಾನು ಒಪ್ಪಲಿಲ್ಲವೆಂದು Politburo ದವರು ಅವತ್ತು ಅದಕ್ಕೆ ಕಾರಣಗಳನ್ನು ಕೊಟ್ಟರು. ಇವರಿಗೆ ಆಸಕ್ತಿಯಿತ್ತು. ಇದಾದ ಮೇಲೆ ಒಂದು ಸಾರಿ ಒಂದು ಮಾತನ್ನು ಮಾನ್ಯ ಜ್ಯೋತಿಬಸುರವರು ಹೇಳಿದ್ದರು. 'The Communist Party has committe a greatest blunder, a historical blunder' ಎಂಬ ಮಾತಿನ

ಮೂಲಕ ಮಾನ್ಯ ಜ್ಯೋತಿಬಸುರವರೇ ತಮ್ಮ ಮನಸ್ಸಿನ ಆಂತರ್ಯವನ್ನು ಜನರ ಮುಂದೆ ಹೇಳತಕ್ಕ ಕೆಲಸವನ್ನು ಮಾಡಿದ್ದರು. ನಾನು ಅವರ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ಮಾತನ್ನು ಮಾತ್ರ ಹೇಳುತ್ತೇನೆ. ಅವರು ಕಮ್ಯೂನಿಸ್ಟ್ ಪಾರ್ಟಿಯಲ್ಲಿದ್ದರೂ ಕೂಡ, ಎಲ್ಲಾ ಪಕ್ಷದವರೂ ಅವರನ್ನು ಗೌರವಿಸುತ್ತಿದ್ದರು. ಆತರಹದ ವ್ಯಕ್ತಿತ್ವವನ್ನು ಅವರು ಗಳಿಸಿಕೊಂಡಿದ್ದರು. ಅದಕ್ಕಾಗಿಯೇ ಅವರನ್ನು ನಾನು ಮುತ್ಸದ್ಧಿ ರಾಜಕಾಣಿ ಎಂದು ಕರೆಯುತ್ತೇವೆ. Including BJP party, ರಾಷ್ಟ್ರ ಮಟ್ಟದ ಎಲ್ಲಾ ಪಕ್ಷದ ರಾಜಕಾರಣಿಗಳೂ ಕೂಡ ಮಾನ್ಯ ಜ್ಯೋತಿಬಸುರವರ ಬಗ್ಗೆ ಬಹಳ ಅಪಾರವಾದ ಗೌರವವನ್ನು ಇಟ್ಟುಕೊಂಡಿದ್ದರು. ಎಡಪಂಥೀಯ ವಿಚಾರಧಾರೆ ಇಟ್ಟುಕೊಂಡಿದ್ದಂತಹ ಮಾನ್ಯ ಜ್ಯೋತಿಬಸುರವರ ಬಗ್ಗೆ ಬಲಪಂಥೀಯರೂ ಕೂಡ ಗೌರವ ಇಟ್ಟುಕೊಳ್ಳತಕ್ಕಂಥ ಮಟ್ಟಿಗೆ ಅವರ ವ್ಯಕ್ತಿತ್ವ ಬೆಳೆದಿತ್ತು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಲಿಕ್ಕೆ ಬಯಸುತ್ತೇನೆ. ಅಂತಹ ಒಬ್ಬ ರಾಷ್ಟ್ರಮಟ್ಟದ ಮುತ್ಸದ್ಧಿ ರಾಜಕಾರಣಿ ಇವತ್ತು ನಮ್ಮೆಲರಿಂದ ದೂರವಾಗಿದ್ದಾರೆ. ಅದು ಕೇವಲ ಕಮ್ಯೂನಿಸ್ಟ್ ಪಾರ್ಟಿಗೆ ಆದಂತಹ ನಷ್ಟವೇನಲ್ಲ. ಇಡೀ ದೇಶಕ್ಕೆ ಆದಂತಹ ನಷ್ಟವೆಂದು ನಾನು ಭಾವಿಸುತ್ತೇನೆ. ಅವರು ಪೂರ್ಣ ಜೀವನವನ್ನು ನಡೆಸಿದ್ದಾರೆ. ದೀರ್ಘಕಾಲ ಸಮಾಜಸೇವೆ ಮಾಡಿದ್ದಾರೆ. ಅವರ ಆದರ್ಶಗಳು, ಬದುಕಿನ ಬಗ್ಗೆ ಅವರಿಗೆ ಇದ್ದಂತಹ ಪ್ರೀತಿ, ಕಳಕಳಿ, ಅವರ commitment ಇವೆಲ್ಲವೂ ಕೂಡ ರಾಜಕಾರಣಿಗಳಿಗೆ ಮಾರ್ಗದರ್ಶಕವಾಗಿವೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಆ ದಿಕ್ಕಿನಲ್ಲಿ ನಾವೆಲ್ಲಾ ಚಿಂತನೆ ಮಾಡಬೇಕೆನ್ನುವ ಮಾತನ್ನ ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತಿದ್ದೇನೆ. ಇನ್ನು ಶಾಸಕರಾಗಿದ್ದ ದಿವಂಗತ ಶಂಕರಶೆಟ್ಟಿ ಪಾಟೀಲರು ಕೃಷಿಕ ಮನೆತನದಿಂದ ಬಂದವರಾಗಿದ್ದರು. ಅವರು ಒಮ್ಮ ಏಕೀಕರಣ ಆಗುವುದಕ್ಕಿಂತ ಮುಂಚಿತವಾಗಿ ಅಂದಿನ ಮೈಸೂರು ವಿಧಾನ ಸಭೆಗೆ ಕಾಳಗಿ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಅವರೂ ಕೂಡ ಇವತ್ತು ನಮ್ಮನ್ನು ಅಗಲಿದ್ದಾರೆ. ದಿವಂಗತ ಶಿವಶೇಖರಪ್ಪಗೌಡ ಶಿರದಾಳ್‌ರವರು ನಾವಿದ್ದಾಗಲೂ M.L.A. ಆಗಿದ್ದರು. ಅವರು ಗುಲ್ಬರ್ಗಾ ಜಿಲ್ಲೆ ಶಹಾಪುರದವರು. ಮೂರು ಸಾರಿ ಇಲ್ಲಿ ಶಾಸಕರಾಗಿ ಕೆಲಸ ಮಾಡಿದ್ದಾರೆ. ಅವರು ಬಹಳ ಒಳ್ಳೆಯ ಮನುಷ್ಯ.

ಸಹಕಾರಿ ಕ್ಷೇತ್ರದಲ್ಲೂ ಕೂಡ ಕೆಲಸ ಮಾಡಿದ್ದರು. ಅವರು ಕೂಡ ಇಂದು ನಮ್ಮನ್ನು ಅಗಲಿದ್ದಾರೆ. ಕಳೆದ ವಿಧಾನ ಸಭೆ ಚುನಾವಣೆಯಲ್ಲೂ ಕೂಡ ಅವರು ಸ್ಪರ್ಧಿಸಿ, ಪರಾಭವ ಹೊಂದಿದ್ದರು. ದಿವಂಗತ ಕದಂರವರು ನಾವಿದ್ದಾಗ ಇರಲಿಲ್ಲ. ನಾವು ಬರುವುದಕ್ಕಿಂತ ಮುಂಚೆ ಅವರು ಶಾಸಕರಾಗಿದ್ದರು. 1952ರಲ್ಲಿ ಬಾಂಬೆ ವಿಧಾನ ಸಭೆಯಲ್ಲಿ ಶಾಸಕರಾಗಿದ್ದರು. 1962, 1967 ಮತ್ತು 1972ರಲ್ಲಿ ಮೂರು ಬಾರಿ ಕರ್ನಾಟಕ ವಿಧಾನ ಸಭೆಯಲ್ಲಿ ಶಾಸಕರಾಗಿದ್ದರು. 1972ರಿಂದ 1977ರವರೆಗೆ ಈ ಸದನದ ಉಪ ಸಭಾಧ್ಯಕ್ಷರಾಗಿ ಕೂಡ ಕೆಲಸ ಮಾಡಿದ್ದಾರೆ. 1977ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಕೆನರಾ ಕ್ಷೇತ್ರದ ಲೋಕಸಭಾ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಅವರು ಬಹಳ ದೀರ್ಘಕಾಲ ಸಾರ್ವತ್ರಿಕ ಜೀವನದಲ್ಲಿ ಇದ್ದವರು. ಅವರು ವಕೀಲರಾಗಿ ಕೂಡ ಕೆಲಸ ಮಾಡಿದ್ದಾರೆ. ಅನೇಕ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ಸಂಘ ಸಂಸ್ಥೆಗಳಲ್ಲಿ ತಮ್ಮನ್ನು ಅವರು ತೊಡಗಿಸಿಕೊಂಡಿದ್ದರು. ಅಂತಹ ಒಬ್ಬ ವ್ಯಕ್ತಿಯನ್ನು ಇವತ್ತು ನಾವೆಲ್ಲಾ ಕಳೆದುಕೊಂಡಿದ್ದೇವೆ. ಹಾಗೆಯೇ ಶ್ರೀಯುತ ಕೆ.ಎಸ್. ಅಶ್ವಥ್‌ರವರು ನಮ್ಮ ಮೈಸೂರಿನವರು. ಅವರು ಪ್ರಾಮಾಣಿಕ ವ್ಯಕ್ತಿಯಾಗಿದ್ದರು. ಕನ್ನಡ ಚಿತ್ರರಂಗದಲ್ಲಿ ಯಾರಾದರೂ ಬಹಳ ಪ್ರಾಮಾಣಿಕತೆಯಿಂದ ಇದ್ದರು, ಸಜ್ಜನಿಕೆಯ ವ್ಯಕ್ತಿಯಾಗಿದ್ದರು ಎಂದರೆ ಬಹುಶಃ ಅವರಲ್ಲಿ ದಿವಂಗತ ಅಶ್ವಥ್‌ರವರೂ ಕೂಡ ಒಬ್ಬರು ಎಂಬ ಮಾತನ್ನು ಈ ಸಂದರ್ಭದಲ್ಲಿ ನಾನು ನೆನಪಿಸಿಕೊಳ್ಳಲಿಕ್ಕೆ ಬಯಸುತ್ತೇನೆ. ಅವರು 'ನಾಗರಹಾವು' ಚಿತ್ರದಲ್ಲಿ 'ಚಾಮಯ್ಯ ಮೇಸ್ಟ್ರು' ಎಂಬ ಪಾತ್ರದಲ್ಲಿ ನಟಿಸಿ ಹೆಸರುವಾಸಿಯಾಗಿದ್ದರು. ಆ ಚಿತ್ರದಲ್ಲಿ ನಟಿಸಿದ ಮೇಲೆ ಅವರನ್ನು ಎಲ್ಲರೂ 'ಚಾಮಯ್ಯ ಮೇಸ್ಟ್ರು' ಎಂದೇ ಕರೆಯುತ್ತಿದ್ದರು. ಅಷ್ಟರಮಟ್ಟಿಗೆ ಅವರು ಆ ಪಾತ್ರದಲ್ಲಿ ಅಭಿನಯಿಸಿದ್ದರು. ಅವರು ಯಾವುದೇ ಪಾತ್ರವನ್ನು ಮಾಡಿದರೂ ಕೂಡ ಅದಕ್ಕೆ ಜೀವ ತುಂಬುತ್ತಿದ್ದರು. ಅವರು ಹೆಚ್ಚಾಗಿ ಹೀರೋ ಪಾತ್ರಗಳನ್ನು ಮಾಡಲಿಲ್ಲ. ಅವರು ಚಿಕ್ಕ ಪ್ರಾಯದವರಾಗಿದ್ದಾಗ ನಾಯಕ ನಟನಾಗಿ ಅಭಿನಯಿಸಿದ್ದರು. ತದನಂತರ ಹೆಚ್ಚಾಗಿ ಪೋಷಕ ನಟನ ಪಾತ್ರಗಳಲ್ಲೇ ಅಭಿನಯಿಸಿದ್ದರು. ಅವರು 371 ಚಿತ್ರದಲ್ಲಿ ಅಭಿನಯಿಸಿದ್ದಾರೆ ಎಂದರೆ ನಮಗೆಲ್ಲರಿಗೂ ಆಶ್ಚರ್ಯವಾಗುತ್ತದೆ. ಅವರು ಒಮ್ಮೆ ನನಗೆ ಸಿಕ್ಕಿದಾಗ ಒಂದು ಮಾತನ್ನ ಹೇಳಿದರು. ನಾವು, ಅವರ ಮತ್ತು producer

ರೊಬ್ಬರು ಭಾಗವಹಿಸಿದ್ದ ಸಭೆಯಲ್ಲಿ ಅವರು ಈ ಮಾತನ್ನು ಹೇಳಿದರು. ಸಿನಿಮಾದಲ್ಲಿನ ಅವರ ನಟನೆಗೆ ಏನೊಂದು ಸಂಭಾವನೆ ನಿಗದಿ ಮಾಡಿರುತ್ತಾರೋ, ಅದಕ್ಕಿಂತ ಹೆಚ್ಚಾಗಿ ಒಂದು ರೂಪಾಯಿ ಕೊಟ್ಟರೂ ಅವರ ಅದನ್ನು ತೆಗೆದುಕೊಳ್ಳುತ್ತಿರಲಿಲ್ಲ. ಅಷ್ಟರಮಟ್ಟಿಗೆ ಅವರು ಪ್ರಾಮಾಣಿಕರಾಗಿದ್ದರು. ಅಲ್ಲಿದ್ದ producer ರೊಬ್ಬರು ಈ ಮಾತನ್ನು ನನಗೆ ಹೇಳಿದರು. ಅವರಿಗೆ ಯಾವುದೋ ಗೌರವ ಅರ್ಪಿಸತಕ್ಕಂಥ ಸಭೆಯೊಂದರಲ್ಲಿ ನಾನು ಇದ್ದೆ, ಆ producer ರವರೂ ಸಹ ಇದ್ದರು. ಆಗ ಅವರು ಈ ಮಾತನ್ನು ಹೇಳಿದರು. ಒಮ್ಮೆ ಒಂದು ಸಾರಿ ಅವರಿಗೆ ಒಪ್ಪಂದ ಆಗಿದ್ದಕ್ಕಿಂತಲೂ ಹೆಚ್ಚಾಗಿ ದುಡ್ಡು ಕೊಟ್ಟದ್ದರಂತೆ, ಅದನ್ನು ಮನೆಗೆ ಹೋಗಿ ಲೆಕ್ಕ ಹಾಕಿ, ನೀವು ಹೆಚ್ಚಾಗಿ ಕೊಟ್ಟುಬಿಟ್ಟಿದ್ದೀರಿ ಎಂದು ವಾಪಸ್ ದುಡ್ಡನನು ಅವರಿಗೇ ತೆಗೆದುಕೊಂಡು ಬಂದು ಕೊಟ್ಟರಂತೆ, 'ನನಗೆ ಒಪ್ಪಂದ ಮಾಡಿಕೊಂಡಿದ್ದಕ್ಕಿಂತ ದುಡ್ಡು ಜಾಸ್ತಿ ಕೊಟ್ಟಿದ್ದೀರಿ' ಎಂದು ಆ ಹೆಚ್ಚಾದ ಹಣವನ್ನು producerರವರಿಗೆ ವಾಪಸ್ ಕೊಡತಕ್ಕ ಕೆಲಸ ಮಾಡಿದ್ದರು. ಎಂದು ಅವರನ್ನು ನೆನಪಿಸಿಕೊಳ್ಳೂತ್ತಿದ್ದರು. ಅಷ್ಟರಮಟ್ಟಿಗೆ ಅವರೊಬ್ಬ ಪ್ರಾಮಾಣಿಕ ವ್ಯಕ್ತಿಯಾಗಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲೂ ಕೂಡ ಅವರು ತಮ್ಮನ್ನು ತೊಡಗಿಸಿಕೊಂಡಿದ್ದು. ಅವರು ಯಾವಾಗಲೂ ಮೈಸೂರಿನಲ್ಲಿ ತಿರುಗಾಡಬೇಕಾದರೆ ಜಟಕಾ ಗಾಡಿಯಲ್ಲೇ ತಿರುಗಾಡುತ್ತಿದ್ದರು. ಇಲ್ಲವೆಂದರೆ ಒಮ್ಮೊಮ್ಮ ಆಟೋದಲ್ಲಿ ತಿರುಗಾಡುತ್ತಿದ್ದರು. ಅವರು ಕಾರಿನಲ್ಲಿ ತಿರುಗಾಡಿದ್ದನ್ನು ನಾನು ನೋಡಲೇ ಇಲ್ಲ. ನಾನು ಮತ್ತು ಅವರು ಒಂದೇ ಕಡಿಯಲ್ಲಿ cutting ಮಾಡಿಸುತ್ತಿದ್ದೆವು. ಅಲ್ಲಿಗೆ ಯಾವಾಗಲೂ ಆಟೋದಲ್ಲೇ ಬರುತ್ತಿದ್ದರು. ಆಟೋದವನು ಅವರನ್ನು ಮನೆಯಿಂದ ಕರೆದುಕೊಂಡು ಬರಬೇಕು ಮತ್ತು ವಾಪಸ್ ಕರೆದುಕೊಂಡು ಹೋಗಬೇಕಾಗಿತ್ತು. ಆ ತರಹದ ವ್ಯಕ್ತಿ ಅವರು. ಬಹಳ ಒಳ್ಳೆಯ ವ್ಯಕ್ತಿ. ಯಾರನ್ನೂ ಕೂಡ ಅವರು ಅಗೌರವದಿಂದ ಮಾತನಾಡಿಸಿದ್ದನ್ನು ನಾನು ನೋಡೇ ಇಲ್ಲ. ಅವರು ಎಲ್ಲರನ್ನೂ ಬಹಳ ಗೌರವದಿಂದಲೇ ಮಾತನಾಡಿಸುತ್ತಿದ್ದರು. ಅಂತಹ ಒಬ್ಬ ಆದರ್ಶಪ್ರಾಯವಾದಂತಹ ವ್ಯಕ್ತಿ ಇವತ್ತು ನಮ್ಮನ್ನೆಲ್ಲಾ ಅಗಲಿದ್ದಾರೆ. ಅವರ ಸೇವೆಯನ್ನು ಗುರುತಿಸಿ ಅವರ ಕೊನೆಯ ಕಾಲದಲ್ಲಿ ತುಮಕೂರು ವಿಶ್ವವಿದ್ಯಾನಿಲಯ ಅವರಿಗೆ ಗೌರವ ಡಾಕ್ಟರೇಟ್ ಕೂಡ ಕೊಟ್ಟಿತ್ತು. ಅವರು

ಇನ್ನೂ ಹೆಚ್ಚು ಗೌರವಕ್ಕೆ ಪಾತ್ರರಾಗತಕ್ಕಂತಹ ಅರ್ಹತೆ ಇದ್ದಂತಹ ಪ್ರತಿಭಾವಂತ ಕಲಾವಿದರಾಗಿದ್ದರು. ಅವರಿಗೆ ಯಾವುದೇ ಪಾತ್ರ ಕೊಟ್ಟರೂ ಕೂಡ ಅದಕ್ಕೆ ಅವರು ಜೀವ ತುಂಬುತ್ತಿದ್ದರು. Director ಚಿತ್ರಕ್ಕೆ ಜೀವ ತುಂಬುವುದು ಬೇರೆ. ಇವರು ತಮ್ಮ ನಟನೆ ಮೂಲಕ ಪಾತ್ರಗಳಿಗೆ ಜೀವ ತುಂಬತಕ್ಕಂಥ ಕೆಲಸವನ್ನು ಮಾಡುತ್ತಿದ್ದರು. ಅಂತಹ ನಟರು ಇವತ್ತು ನಮ್ಮನ್ನು ಅಗಲಿದ್ದಾರೆ. ಇನ್ನು ರಂಗಭೂಮಿ ಕಲಾವಿದೆಯಾಗಿದ್ದ ದಿವಂಗತ ಚಿಂದೋಡಿ ಲೀಲಾರವರ ಬಗ್ಗೆ ಹೇಳುವುದಾದರೆ, ಇವರು *'ಪೊಲೀಸನ ಮಗಳು'* ಎಂಬ ನಾಟಕವನ್ನು ಪ್ರದರ್ಶಿಸಿದ್ದರು. ಇವರನ್ನು 'ಪೊಲೀಸನ ಮಗಳು' ಎಂಬ ಅನ್ವರ್ಥ ನಾಮದಿಂದಲೇ ಎಲ್ಲರೂ ಕರೆಯುತ್ತಿದ್ದರು. ಇವರು ದಾವಣಗೆರೆಯವರು. ಅವರು ನಮ್ಮ ಗಡಿನಾಡು ಜಿಲ್ಲೆಯಾದ ಬೆಳಗಾಂನಲ್ಲಿ ಹೆಚ್ಚು ನಾಟಕಗಳನ್ನು ಆಡುತ್ತಿದ್ದರು. ಅವರ 'ಪೊಲೀಸನ ಮಗಳು' ನಾಟಕ ವಿಶ್ವದಾಖಲೆ ಮಾಡುವಷ್ಟರ ಮಟ್ಟಿಗೆ ಪ್ರದರ್ಶನವಾಗಿತ್ತು. ಅಷ್ಟರಮಟ್ಟಿಗೆ ಆ ನಆಟಕ ಜನಪ್ರಿಯವಾಗಿತ್ತು. ನಾವು ಅಮೆರಿಕಾ, ಇಂಗ್ಲೆಂಡ್‌ಗಳಲ್ಲೆಲ್ಲಾ ನಾಟಕಗಳು ವರ್ಷಗಟ್ಟಲೆ ನಡೆಯುತ್ತಿವೆಂದು ಕೇಳುತ್ತಿದ್ದೆವು. ಆ ರೀತಿ ಇವರ 'ಪೊಲೀಸನ ಮಗಳು' ನಾಟಕ ಕೂಡ ಬಹಳ ದೀರ್ಘಕಾಲ ನಡೆದಂತಹ, ವಿಶ್ವದಾಖಲೆ ಪ್ರದರ್ಶನ ಮಾಡಿದಂತಹ ನಾಟಕವಾಗಿತ್ತು. ಅವರು ಚಲನಚಿತ್ರ ರಂಗದಲ್ಲೂ ಕೂಡ ನಟನೆ ಮಾಡಿದ್ದಾರೆ. ಆದರೆ ಅವರು ಹೆಚ್ಚಾಗಿ ತಮ್ಮನ್ನು ರಂಗಭೂಮಿಯಲ್ಲಿ ತೊಡಗಿಸಿಕೊಂಡಿದ್ದರು. ಜನರು ಅವರನ್ನು ರಂಗಭೂಮಿ ಕಲಾವಿದೆ ಎಂದೇ ಗುರುತಿಸುತ್ತಾರೆ. ಅವರಿಗೆ ಬಹಳಷ್ಟು ಪ್ರಶಸ್ತಿಗಳು ಸಿಕ್ಕಿವೆ. ಅವರಿಗೆ ಪದ್ಮಶ್ರೀ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿಗಳು ಅವರಿಗೆ ಸಿಕ್ಕಿವೆ. ಅವರೂ ಕೂಡ ಇವತ್ತು ನಮ್ಮನ್ನು ಅಗಲಿದ್ದಾರೆ.

11.40 ಎ.ಎಂ.

ಮತ್ತೆ, ವೈಕುಂಠರಾಜುರವರು ಚಿತ್ರದುರ್ಗಾ ಜಿಲ್ಲೆಯವರು. ಸ್ನಾತಕೋತ್ತರ ಪದವಿ ಮಾಡಿಕೊಂಡು ಕಾಲೇಜಿನಲ್ಲಿ ಲೆಕ್ಚರರ್ ಆಗಿ ಕೆಲಸ ಮಾಡಿ ಆಮೇಲೆ ಪತ್ರಕರ್ತರಾಗಿ ತಮ್ಮನ್ನು ತೊಡಗಿಸಿಕೊಂಡು, ನಾವೆಲ್ಲಾ ಆಗ ತಾನೆ ರಾಜಕಾರಣಕ್ಕೆ ಬಂದಾಗ ಇವರು ಪತ್ರಕರ್ತರಾಗಿದ್ದರು. ಆಮೇಲೆ ಲಂಕೇಶ್ ಅವರು ಲಂಕೇಶ್ ಪತ್ರಿಕೆ ನಡೆಸುತ್ತಿದ್ದಂಥ ಸಂದರ್ಭದಲ್ಲಿ ಇವರು

ಕೂಡ ವಾರಪತ್ರಿಕೆ ಎಂದು ಒಂದು ಪತ್ರಿಕೆಯನ್ನು ನಡೆಸುತ್ತಿದ್ದರು, ಲಂಕೇಶ್, ತೇಜಸ್ವಿ ಇವರೆಲ್ಲಾ ಸಮಕಾಲಿನರು, ಬಹಳ ವೈಚಾರಿಕವಾದ ಮನೋಧರ್ಮವನ್ನು ಇಟ್ಟುಕೊಂಡಿದ್ದಂಥವರು, ಮುಖ್ಯವಾಗಿ ಸಮಾಜಕ್ಕೆ ಕೆಲಸ ಮಾಡುತ್ತಿದ್ದಂಥವರು, ಬಹಳ ನಿಷ್ಠೂರವಾಗಿ ಮಾತನಾಡುವಂಥ, ಬರೆಯುವಂಥ ಪತ್ರಕರ್ತರಾಗಿದ್ದರು. ಪ್ರಾಮಾಣಿಕರಾಗಿದ್ದಾಗ ಮಾತ್ರ ನಿಷ್ಠೂರವಾಗಿ ಬರೆಯುವುದಕ್ಕೆ ಸಾಧ್ಯವಾಗುತ್ತದೆ, ಹಾಗಾಗಿ ಅವರು ನಿಷ್ಠುರವಾಗಿ ಕೂಡ ಬರೆಯುತ್ತಿದ್ದರು. ಅವರ ವಾರಪತ್ರಿಕೆಯಲ್ಲಿ ಯಾವಾಗಲು ಅವರು ಸಂಪಾದಕ ಡೈರಿ ಎಂದು editorial ಬರೆಯುತ್ತಿದ್ದರು. ಅದರಲ್ಲಿ ಅವರ ಅಭಿಪ್ರಾಯವನ್ನು ಬಹಳ ನಿಷ್ಠೂರವಾಗಿ, ಗೊಂದಲವಿಲ್ಲದ ರೀತಿಯಲ್ಲಿ, ಬಹಳ ಸ್ಪಷ್ಟವಾಗಿ ಹೇಳುವಂಥ ಕೆಲಸವನ್ನು ಮಾಡುತ್ತಿದ್ದರು. ಅಷ್ಟರಮಟ್ಟಿಗೆ ಪತ್ರಿಕಾರಂಗದಲ್ಲಿ ಅವರು ಬಹಳಷ್ಟು ದಿವಸಗಳ ಕಾಲ ತೊಡಗಿಸಿಕೊಂಡು ಅಪಾರವಾದ ಸೇವೆಯನ್ನು ಮಾಡಿದ್ದಾರೆ. ಇವರು ಅನೇಕ ಸಂಘ-ಸಂಸ್ಥೆಗಳ ಅಧ್ಯಕ್ಷರಾಗಿಯೂ ಕೂಡ ಕೆಲಸ ಮಾಡಿದ್ದಾರೆ, ನಾಟಕ ಅಕಾಡೆಮಿ ಪ್ರಶಸ್ತಿ ಕೂಡ ಸಿಕ್ಕಿದೆ, ಅನೇಕ ಪುಸ್ತಕಗಳನ್ನು ಬರೆದಿದ್ದಾರೆ, ಒಳ್ಳೆಯ ಸಾಹಿತಿಯು ಕೂಡ ಆಗಿದ್ದರು. ಹಾಗಾಗಿ ಒಬ್ಬ ಒಳ್ಳೆಯ ಸಾಹಿತಿ, ಪತ್ರಕರ್ತ, ಸಾಮಾಜಿಕ ವ್ಯಕ್ತಿ, ಈ ಎಲ್ಲಾ ಗುಣಗಳಿದ್ದಂಥ ಒಬ್ಬ ವ್ಯಕ್ತಿಯನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಇವತ್ತು ಜ್ಯೋತಿಬಸು, ಅಶ್ವಥ್, ಚಿಂದೋಡಿ ಲೀಲಾ, ಕದಂ, ವೈಕುಂಠ ರಾಜು, ಇವರೆಲ್ಲರೂ ಸಮಾಜಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದಂಥವರು, ಈ ಸಂದರ್ಭದಲ್ಲಿ ಇವರ ಸಾವಿನಿಂದ ಸಮಾಜಕ್ಕೆ, ನಾಡಿಗೆ ಬಹಳ ನಷ್ಟವಾಗಿದೆ. ಜ್ಯೋತಿಬಸುರವರ ಸಾವಿನಿಂದ ದೇಶಕ್ಕೆ ದೊಡ್ಡ ನಷ್ಟವಾಗಿದೆ ಎಂದು ನೆನಪು ಮಾಡಿಕೊಳ್ಳುತ್ತಾ, ಇವರೆಲ್ಲರ ಆತ್ಮಕ್ಕೆ ಚಿರಶಾಂತಿ ದೊರಕಲಿ, ಇವರ ಕುಟುಂಬ ವರ್ಗದವರಿಗೆ, ಇವರ ಸಾವಿನ ದು:ಖ ಭರಿಸತಕ್ಕಂಥ ಶಕ್ತಿ ಬರಲೆಂದು ಹೇಳಿ, ನಾನು ಪ್ರಾರ್ಥನೆ ಮಾಡಿ, ಇದುವರೆವಿಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ತಾವೇನು ಸಂತಾಪ ಸೂಚನೆಯನ್ನು ಮಂಡನೆ ಮಾಡಿದ್ದೀರಿ, ಅದಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತಾ, ಮಾನ್ಯ

ಜ್ಯೋತಿಬಸುರವರು 23 ವರ್ಷ ದೀರ್ಘಕಾಲ ಮುಖ್ಯಮಂತ್ರಿಗಳಾಗಿ ಸೇವೆ ಸಲ್ಲಿಸಿರುವಂಥದ್ದನ್ನು, ಅವರ ಆಡಳಿತ ವ್ಯವಸ್ಥೆ ಮತ್ತು ಜನಪರವಾದ ಕಾಳಜಿ ಇವೆಲ್ಲವನ್ನೂ ಎಲ್ಲಾ ರಾಜಕಾರಣಿಗಳು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಬಹುಶ: ಒಂದು ಉತ್ತಮ ಆಡಳಿತ ವ್ಯವಸ್ಥೆಯನ್ನು ತಂದಿದ್ದರಿಂದ, ರೈತಪರವಾದ ಮತ್ತು ಗ್ರಾಮೀಣ ಮಟ್ಟಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟಿದ್ದರಿಂದ ಬಹುಶ: ಜ್ಯೋತಿಬಸುರವರು 23 ವರ್ಷ ಸುದೀರ್ಘಕಾಲ ಆ ವೆಸ್ಟ್ ಬಂಗಾಳದ ಮುಖ್ಯಮಂತ್ರಿಗಳಾಗಿ ಕಾರ್ಯನಿರ್ವಹಣೆ ಮಾಡಿದರೆಂಬುದನ್ನು ನಾವು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಬೇಕಾಗುತ್ತದೆ. ಇಷ್ಟು ಸುದೀರ್ಘವಾಗಿ ಮುಖ್ಯಮಂತ್ರಿಗಳಾದವರಲ್ಲಿ ಇವರೇ ಮೊದಲಿಗರು. ಬಹುಶ: ರಾಜಸ್ಥಾನದ ಮುಖ್ಯಮಂತ್ರಿಗಳಾಗಿದ್ದಂಥ ಇನ್ನೊಬ್ಬರಾದ ಮೌನವ್ ಸುಕಾಡಿಯ ಇವರು 17 ವರ್ಷಗಳ ಕಾಲ ಮುಖ್ಯಮಂತ್ರಿಗಳಾಗಿದ್ದರೆಂಬುದು ನಮಗೆ ನೆನಪಿದೆ. ಈ ರೀತಿ ದೀರ್ಘಕಾಲವಾಗಿ ಆಡಳಿತ ನಡೆಸುವುದೆ ಅವರ ಕಾರ್ಯದಕ್ಷತೆಯನ್ನು ತೋರಿಸುತ್ತದೆ. ಹಾಗಾಗಿ ಮಾನ್ಯ ಜ್ಯೋತಿಬಸುರವರು ಎಲ್ಲಾ ರಾಜಕಾರಣಿಗಳಿಗೆ ಒಂದು ಆಡಳಿತ ವ್ಯವಸ್ಥೆಯನ್ನು ಯಾವರೀತಿ ನಡೆಸಬೇಕೆಂಬುದರ ಬಗ್ಗೆ ಮಾರ್ಗದರ್ಶಕರೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತೆ ಶಂಕರಶೆಟ್ಟಿ ಪಾಟೀಲರು, ಶಿವಶೇಖರಪ್ಪಗೌಡ ಶಿರವಾಳ್ ಅವರು, ಬಿ.ಪಿ.ಕದಂರವರು ಸಹಿತ ಶಾಸಕರಾಗಿ, ಲೋಕಸಭೆ ಸದಸ್ಯರಾಗಿ ಸಮಾಜ ಸೇವೆಯನ್ನು ಮಾಡಿದ್ದಾರೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತು ಕೆ.ಎಸ್.ಅಶ್ವಥ್ ಮತ್ತು ಚಿಂದೋಡಿ ಲೀಲಾ ಅವರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ವಿರೋಧಪಕ್ಷದ ನಾಯಕರು ಸಾಕಷ್ಟು ವಿಚಾರಗಳನ್ನು ಹೇಳಿದರು. ದಿ: ಕೆ.ಎಸ್. ಅಶ್ವಥ್ ಅವರ ಬಗ್ಗೆ ಹೇಳುವುದಾದರೆ, ಅವರು ಚಲನಚಿತ್ರರಂಗದಲ್ಲಿ ಒಬ್ಬ ಸರಳ ಸಜ್ಜನಿಕೆಯ ವ್ಯಕ್ತಿ. ಚಾಮಯ್ಯ ಮೇಸ್ಟ್ರು ಎನ್ನುವ ಪಾತ್ರದಿಂದ ಅವರು ಬಹಳ ಪ್ರಸಿದ್ಧಿ ಯಾಗಿದ್ದು. ಚಾಮಯ್ಯ ಮೇಸ್ಟ್ರು ಎಂದು ಏಕೆ ಪ್ರಸಿದ್ಧರಾದರೆಂದರೆ, ಆ ಪಾತ್ರದಲ್ಲಿ ಅವರು ಜೀವಂತಿಕೆಯನ್ನು ತುಂಬಿದರು. ಆ ಪಾತ್ರದಲ್ಲಿ ತಾವಾಗಿಯೇ ಸಹಜವಾಗಿ ನಟಿಸುವಂಥ ಅಭಿನಯವೇನಿದೆ ಅದರಿಂದಲೇ ಚಾಮಯ್ಯ ಮೇಸ್ಟ್ರು ಎಂದು ಇವತ್ತು ಜನರು ಅವರನ್ನು

ಗುರುತಿಸಿದ್ದು. ಹೀಗಾಗಿ ಇವತ್ತು ಚಲನಚಿತ್ರರಂಗದಲ್ಲಿ ಈ ರೀತಿ ಸಹಜ ಅಭಿನಯ ಮಾಡುವಂಥ ಕೆಲವೇ ಕೆಲವು ನಟರಿದ್ದಾರೆ, ಅಂಥವರಲ್ಲಿ ಅಶ್ವಥ್‌ರವರು ಒಬ್ಬರಾಗಿದ್ದರು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತಿದ್ದೇನೆ. ಮತ್ತು ನಾಗರ ಹಾವಿನ ಚಲನಚಿತ್ರದ ಆ ಪಾತ್ರವಷ್ಟೇ ಅಲ್ಲ, ಬೇರೆ ಬೇರೆ ರೀತಿಯಾದಂಥ ಚಲನಚಿತ್ರಗಳಲ್ಲಿ ಅವರ ಪಾತ್ರಗಳನ್ನು ನೋಡಿದರೆ, ಅವರ involvement, ಯಾವುದೇ ಒಂದು ನಟನೆ ಮಾಡುವಂಥ ಸಂದರ್ಭದಲ್ಲಿ ಆ ಪಾತ್ರದಕ್ಕೆ ಜೀವಂತಿಕೆ ತುಂಬುವಂಥ involvement ಇದೆಯಲ್ಲ, ಅದರಿಂದಲೇ ಅವರು ಬಹಳ ಪ್ರಸಿದ್ಧರಾಗಿದ್ದರೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಹೀಗಾಗಿ ಅವರೊಬ್ಬ ಉತ್ತಮ ನಟರಾಗಿದ್ದರು, ಇವತ್ತು ಅವರ ಅಗಲಿಕೆಯಿಂದಾಗಿ ಬಹುಶ: ನಮ್ಮ ಕನ್ನಡ ಚಲನಚಿತ್ರರಂಗ ಬಹಳ ಬಡವಾಗಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಶ್ರೀಮತಿ ಚಿಂದೋಡಿ ಲೀಲಾರವರ ಬಗ್ಗೆ ಹೇಳುವುದಾದರೆ, ಇವತ್ತೇನು ರಂಗಭೂಮಿ ನಶಿಸಿ ಹೋಗುತ್ತಿರುವ ಈ ಸಂದರ್ಭದಲ್ಲಿ ತಮ್ಮ ಜೀವವಿರುವ ಕೊನೆಯವರೆಗೂ ಸಹಿತ ಆ ರಂಗಭೂಮಿಗಾಗಿ ಸೇವೆ ಮಾಡಿದಂಥವರು ಚಿಂದೋಡಿ ಲೀಲಾರವರು. ಇನ್ನೊಂದು ಪ್ರಮುಖವಾದ ಅಂಶವೆಂದರೆ, ಅವರು ಬಹಳ ಸಹಜಪ್ರಿಯರಾಗಿದ್ದರು. ಎಲ್ಲಿ ಆ ಒಂದು ರಂಗಭೂಮಿಗೆ ಹೆಚ್ಚು ಪ್ರೋತ್ಸಾಹವಿಲ್ಲ, ಎಲ್ಲಿ ಆ ರಂಗಭೂಮಿ ಅವಸಾನವಾಗುತ್ತಿದೆ, ಅಂಥ ಸ್ಥಳಗಳಲ್ಲಿ ಇವತ್ತು ತಮ್ಮ ನಾಟಕಗಳ ಮುಖಾಂತರ ಜನರ ಮನಸ್ಸನ್ನು ಗೆದ್ದಂಥವರು ಚಿಂದೋಡಿ ಲೀಲಾ. ಇನ್ನು ಉದಾಹರಣೆ ಕೊಡುವುದಾದರೆ, ಬೆಳಗಾವಿ, ಅದು ಗಡಿಪ್ರದೇಶ, ಇವತ್ತು ಯಾವರೀತಿ ಕನ್ನಡ ಸ್ಥಿತಿ ಬೆಳಗಾವಿ ನಗರದಲ್ಲಿದೆ ಎಂಬುದನ್ನು ನಾವು ಆಲೋಚನೆ ಮಾಡುವಂಥ ಸಂದರ್ಭದಲ್ಲಿ ಅಂಥ ಬೆಳಗಾಂನಲ್ಲಿ ಚಿಂದೋಡಿ ಲೀಲಾರವರು ತಮ್ಮ ನಾಟಕವನ್ನು 365 ದಿವಸಗಳು ಕಾಲ ನಡೆಸುವುದು ಬಹಳ ಕಷ್ಟಕರ. ಅಂಥದ್ದರಲ್ಲಿ ಜನಮನ್ನಣೆಯನ್ನು, ಕಲಾವಿದರ ಮನ್ನಣೆಯನ್ನು ಗಳಿಸಿ, ಇವತ್ತು ಚಿಂದೋಡಿ ಲೀಲಾವರು ಆ ಗಡಿಪ್ರದೇಶದಲ್ಲಿ ತಮ್ಮ ನಾಟಕದ ಮುಖಾಂತರ ಪ್ರಸಿದ್ಧರಾದರು ಎನ್ನುವ ಮಾತನ್ನು ಹೇಳುತ್ತೇನೆ. ಅಷ್ಟೆ ಅಲ್ಲ, ಬೆಂಗಳೂರಿನಲ್ಲೂ ಸಹಿತ ಸತತ ತಮ್ಮ

ಈ ನಾಟಕಗಳ ಮುಖಾಂತರ ಇವತ್ತು ಹೆಚ್ಚು ಪ್ರಸಿದ್ಧರಾಗಿದ್ದರು, ಆ ಒಂದು ರಂಗಭೂಮಿಗೆ ಹೆಚ್ಚಿನ ಜೀವಂತಿಕೆ ತಂದ ಕಲಾವಿದೆ ಶ್ರೀಮತಿ ಚಿಂದೋಡಿ ಲೀಲಾವೆನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ಇನ್ನು ಮಾನ್ಯ ಬಿ.ವಿ.ವೈಕುಂಠರಾಜುರವರ ಬಗ್ಗೆ ಹೇಳುವುದಾದರೆ, ಇವತ್ತು ಅವರು ಪತ್ರಿಕಾ ಉದ್ಯಮದಲ್ಲಿ ಒಬ್ಬ ಧೀಮಂತ ವ್ಯಕ್ತಿ ಎಂದು ಕರೆಯಬೇಕಾಗುತ್ತದೆ. ಹಿಂದೆ ಯಾವರೀತಿ ಲಂಕೇಶ್‌ರವರು ತಮ್ಮ ಲಂಕೇಶ್ ಪತ್ರಿಕೆಯ ಮುಖಾಂತರ ಒಂದು ಪತ್ರಿಕಾ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ತರುವಂಥ ಕೆಲಸವನ್ನು ಮಾಡಿದರು, ಅದೇ ರೀತಿ ವೈಕುಂಠರಾಜುರವರು ಕೂಡ ತಮ್ಮ ರಛನಾತ್ಮಕವಾದಂಥ, ಬಹಳ ಒಂದು ಹೋತಾತ್ಮಕವಾದಂಥ, ಗಂಭೀರವಾದ ಲೇಖನಗಳ ಮುಖಾಂತರ ವೈಕುಂಠರಾಜುರವರು ಇವತ್ತು ತಮ್ಮ ಪತ್ರಿಕಾ ವ್ಯಕ್ತಿತ್ವಕ್ಕೆ ಹೆಚ್ಚಿನ ಮೆರುಗನ್ನು ಕೊಟ್ಟರೆನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಅವರ ಅಂಕಣಗಳನ್ನು ನಾವು ನೋಡಿದ್ದೇವೆ, ಆ ವಾರಪತ್ರಿಕೆ ಎನ್ನುವ ಪತ್ರಿಕೆ ಏನಿತ್ತು, ಅದರಲ್ಲಿ ಅವರು ಬರೆಯುತ್ತಿದ್ದ ಸಂಪಾದಕರ ಡೈರಿಯಲ್ಲಿ, ಅವತ್ತಿನ ರಾಜಕೀಯ ವಸ್ತುಸ್ಥಿತಿ, ರಾಜಕೀಯ ವ್ಯಕ್ತಿಗಳ ಬಗ್ಗೆ ಇರುವ ಆಲೋಚನೆಗಳು ಮತ್ತು ಬಹಳಷ್ಟು ಸೂಕ್ಷ್ಮವಾದ ಸಂವೇದನೆಗಳ ಮುಖಾಂತರ ಆ ಒಂದು ರಾಜಕೀಯ ಲೇಖನಗಳ ಮೂಲಕ ಕೂಡ ಅವರು ಒಂದು ರೀತಿಯಾದ ರಾಜಕೀಯ ಗಂಭೀರತೆಯನ್ನು ತರುವ ಪ್ರಯತ್ನವನ್ನು ವೈಕುಂಠರಾಜುರವರು ಮಾಡಿದರು.

ಅವರ ವಾರಪತ್ರಿಕೆ ಇರಬಹುದು, ಮತ್ತು ಬೇರೆ ಬೇರೆ ವಿಜಯ ಕರ್ನಾಟಕ ಇರಬಹುದು, ಪ್ರಜಾವಾಣಿ ಇರಬಹುದು, ಇನ್ನಿತರ ಹಲವಾರು ಪತ್ರಿಕೆಗಳಲ್ಲಿ ಅವರು ಅಂಕಣಗಳನ್ನು ಬರೆಯುತ್ತಿದ್ದರು. ರಾಜಕೀಯ ಹಿನ್ನೆಲೆ ಇರತಕ್ಕಂತಹ ಅಂಕಣಗಳು ಏನು ಬರೆಯುತ್ತಿದ್ದರು ಅದಕ್ಕೆ ಒಂದು ವೇಟ್ ಇತ್ತು. ಅವರು ಬರೆದಂತಹ ಲೇಖನ ಅದರಲ್ಲಿ ಇರುವಂತಹ ವಿಷಯಕ್ಕೆ ರಾಜಕೀಯ ವ್ಯಕ್ತಿಗಳು ಮತ್ತು ಸಾರ್ವಜನಿಕರು ಅದಕ್ಕೆ ಬಹಳಷ್ಟು ಸ್ಪಂದನ ಮಾಡುತ್ತಿದ್ದರು. ಅದಕ್ಕೆ ಬಹಳ ಮಹತ್ವ ಕೊಡುತ್ತಿದ್ದರು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬೇಕಾಗುತ್ತದೆ. ಅಂತಹ ಒಬ್ಬ ನೈಜ ಪತ್ರಕರ್ತರಾದ ವೈಕುಂಟರಾಜು ಹಿರಿಯರು ಮತ್ತು ನಮ್ಮ ಪತ್ರಿಕಾ ಮಾಧ್ಯಮಕ್ಕೆ ಹೆಚ್ಚು ಮಾರ್ಗದರ್ಶನ ಮಾಡತಕ್ಕಂತಹ ವೈಕುಂಟರಾಜುರವರು

ಇವತ್ತು ನಮ್ಮ ಮಧ್ಯದಲ್ಲಿ ಇಲ್ಲ ಎನ್ನುವಂತಹ ಕೊರಗು ಇದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಎಲ್ಲಾ ಹಿರಿಯ ವ್ಯಕ್ತಿಗಳು ಇವತ್ತು ನಮ್ಮನ್ನು ಅಗಲಿ ಹೋಗಿದ್ದಾರೆ. ಅವರ ಆತ್ಮಕ್ಕೆ ನಾವೆಲ್ಲಾ ಶಾಂತಿಯನ್ನು ಕೋರಿ ಅವರ ಕುಟುಂಬ ವರ್ಗಕ್ಕೆ ಅವರ ಅಗಲಿಕೆಯಿಂದ ಏನು ದುಃಖವಾಗಿದೆ ಅದನ್ನು ಭರಿಸುವಂತಹ ಶಕ್ತಿ ಕೊಡಲಿ ಎಂದು ಹೇಳಿ ದೇವರಲ್ಲಿ ಪ್ರಾರ್ಥನೆ ಮಾಡಿ ತಮ್ಮ ಸಂತಾಪ ಸೂಚನೆಗೆ ಬೆಂಬಲ ಕೋರಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

2. ಪ್ರಕಟಣೆ:

ಅಧ್ಯಕ್ಷರು : ಎಲ್ಲಾ ಸದಸ್ಯರ ಗಮನಕ್ಕಾಗಿ, ತಮಿಳುನಾಡಿನ ವಾರ್ತಾ ಸಚಿವರಾದ ಶ್ರೀ ಪರವೀರಮ್ ಪರವಿ ಅವರು ಅಧ್ಯಕ್ಷರ ಗ್ಯಾಲರಿಯಲ್ಲಿ ಕುಳಿತಿದ್ದಾರೆ. ಸಭೆಯ ಕಲಾಪವನ್ನು ವೀಕ್ಷಿಸಲು ಬಂದಿದ್ದಾರೆ ಅವರಿಗೆ ತಮ್ಮೆಲ್ಲರ ಪರವಾಗಿ ಸ್ವಾಗತವನ್ನು ಬಯಸುತ್ತೇನೆ.

3. ಸಂತಾಪ ಸೂಚನೆ (ಮುಂದುವರೆದುದು):

ಡಾ: ಎ.ಬಿ. ಮಾಲಕರೆಡ್ಡಿ (ಯಾದ್‌ಗಿರಿ) : ಮಾನ್ಯ ಸಭಾಧ್ಯಕ್ಷರೆ, ತಾವು ತಂದಿರುವಂತಹ ಈ ಸಂತಾಪ ಸೂಚನೆಗೆ ಅನುಮೋದನೆಯನ್ನು ವ್ಯಕ್ತ ಮಾಡುತ್ತಾ, ಈಗಾಗಲೇ ಎಲ್ಲಾ ಹಿರಿಯ ಮುಖಂಡರು ಅಗಲಿದೆ ಧುರೀಣರ ಬಗ್ಗೆ ರಾಜಕೀಯ ಮುತ್ಸದ್ಧಿಗಳ ಬಗ್ಗೆ ಅನೇಕ ಮಾತುಗಳನ್ನಾಡಿದ್ದಾರೆ. ಶ್ರೀ ಜ್ಯೋತಿ ಬಸು, ಶಂಕರಶೆಟ್ಟಿ ಪಾಟೀಲರು, ಶಿವಶೇಖರಪ್ಪಗೌಡರು, ಮಾಜಿ ಸಂಸದರೂ ಹಾಗೂ ಶಾಶಕರೂ ಆಗಿದ್ದಂತಹ ಶ್ರೀ ಕದಂ ರವರು ಕನ್ನಡ ಚಲನಚಿತ್ರದ ಪೋಷಕ ನಟರಾಗಿದ್ದ ಅಶ್ವಥ್‌ರವರು ಮತ್ತು ರಂಗಭೂಮಿಯಲ್ಲಿ ನಟಿಯಾಗಿದ್ದ ಶ್ರೀಮತಿ ಚಿಂದೋಡಿ ಲೀಲಾರವರು ಮತ್ತು ಖ್ಯಾತ ಪತ್ರಕರ್ತರಾದ ಶ್ರೀ ಬಿ.ವಿ. ವೈಕುಂಠರಾಜು ರವರು ಇವರೆಲ್ಲರೂ ತಮ್ಮ ತಮ್ಮ ಕ್ಷೇತ್ರದಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿದ್ದಾರೆ ಮತ್ತು ಖ್ಯಾತಿಯನ್ನೂ ಪಡೆದಿದ್ದಾರೆ. ಶ್ರೀ ಜ್ಯೋತಿ ಬಸುರವರು ಇಡೀ ಭಾರತದೇಶದಲ್ಲಿಯೇ ತಮ್ಮದೇ ಆದ ಒಂದು ರಾಜಕೀಯ ಮುದ್ರೆಯನ್ನು ಹಾಕಿ ಹೋಗಿದ್ದಾರೆ. ಅವರಿಂದ ನಾವೆಲ್ಲರೂ ಬಹಳಷ್ಟು ಕಲಿಯಬೇಕಾಗಿದೆ. ನಮ್ಮ ವಿರೋಧ ಪಕ್ಷದ ಧುರೀಣರು ಹೇಳಿದರು. ಎಲ್ಲಾ ಪಕ್ಷದ ಧುರೀಣರ ಮೆಚ್ಚುಗೆಯನ್ನು ಅವರು ಪಡೆದಿದ್ದರು ಎಂದು ಹೇಳಿದರು. ಇಷ್ಟೊಂದು

ದೀರ್ಘಕಾಲ ಸಾರ್ವಜನಿಕ ಕ್ಷೇತ್ರದಲ್ಲಿ ಮತ್ತು ರಾಜಕೀಯ ಕ್ಷೇತ್ರದಲ್ಲಿ ಕೆಲಸ ಮಾಡಿ ಎಲ್ಲರ ಮೆಚ್ಚುಗೆಯನ್ನು ಪಡೆಯತಕ್ಕಂಥದ್ದು ಅದನ್ನು ಉಳಿಸಿಕೊಂಡು ಹೋಗತಕ್ಕಂಥದ್ದು ಬಹಳ ವಿಶೇಷ. ಅವರ ಬಗ್ಗೆ ಒಂದು ಮಾತನ್ನು ನಾನು ಇವತ್ತು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಭಾರತದೇಶದ ರಾಜಕೀಯ ಚಿತ್ರವನ್ನು ನೋಡಿದ ಮೇಲೆ 1977ನೇ ಇಸವಿಯಲ್ಲಿ ಅವರು ಐದಾರು ಪಕ್ಷಗಳನ್ನು ಸೇರಿಸಿ ಚುನಾವಣೆಗೆ ಹೋದರು. ಅಧಿಕಾರಕ್ಕೆ ಬಂದ ಮೇಲೆ ಒಡಂಬಡಿಕೆ ಮೇಲೆ ಅಧಿಕಾರವನ್ನು ಹಂಚಿ ಕೊಟ್ಟರು. 1987ನೇ ಇಸವಿಯಲ್ಲಿ 1997ನೇ ಇಸವಿಯಲ್ಲಿ ಆರು ಪಕ್ಷಗಳು ಸೇರಿ ಚುನಾವಣೆಗೆ ಹೋದರೂ ಕೂಡ CPM ಪಕ್ಷಕ್ಕೆ 2/3rd majority ಬಂದಿತ್ತು. ತಮ್ಮ ಕಾಲ ಮೇಲೆ ತಾವು ನಿಲ್ಲತಕ್ಕಂತಹ ರಾಜಕೀಯ ಶಕ್ತಿಯನ್ನು ಹೊಂದಿದ್ದರೂ ಕೂಡ ಯಾವ ಅಂಗಪಕ್ಷಗಳನ್ನೂ ಅವರು ಬಿಟ್ಟು ಕೊಡಲಿಲ್ಲ. ಬೇರೆ ಬೇರೆ ರಾಜ್ಯಗಳಲ್ಲಿ ತಮ್ಮದೇ ಆದ ಮೆಜಾರಿಟಿ ಬಂದಾಗ, ತಮಿಳುನಾಡಿನಲ್ಲಿ ತಾವು ನೋಡಬಹುದು. ನಮಗೂ ಬೇರೆ ಪಕ್ಷದವರಿಗೂ ಸಂಬಂಧ ಇಲ್ಲ ಎನ್ನುವ ರೀತಿಯಲ್ಲಿ ವರ್ತನೆ ಮಾಡಿ ದೂರ ಇಟ್ಟರು. ಚುನಾವಣೆಗೆ ಹೋಗುವ ಸಂದರ್ಭದಲ್ಲಿ ಅವರು ಜೊತೆಗೆ ಹೋದರು. ಫಲಿತಾಂಶ ಬಂದು ತಮ್ಮದೇ ಆದ ಶಕ್ತಿ ಬಂದಾಗ ಎಲ್ಲರನ್ನೂ ದೂರ ಇಟ್ಟರು. ಆದರೆ ಅವರು ಬಹಳ ದಿವಸ ಬಾಳಲಿಲ್ಲ. ಆದರೆ ದಿ. ಜ್ಯೋತಿ ಬಸುರವರು ಒಡಂಬಡಿಕೆಯ ಮೇರೆಗೆ ತಮ್ಮದೇ ಆದ 2/3rd majority ಬಂದರೂ ಕೂಡ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಅವರು ಮುನ್ನಡೆಸಿಕೊಂಡು ಹೋದರು. ಅವರು ದೊಡ್ಡ ಮುತ್ಸದ್ದಿ ರಾಜಕಾರಿಣಿ. ಅವರಿಂದ ಕಲಿಯತಕ್ಕಂತಹ ಪಾಠ ಬಹಳಷ್ಟಿದೆ. ಅವರಿಗೆ ನಾನು ಹೃತ್ಪೂರ್ವಕ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತೇನೆ. ಶ್ರೀ ಶಂಕರಶೆಟ್ಟಿ ಪಾಟೀಲರು ಮತ್ತು ಶಿವಶೇಖರಪ್ಪ ಗೌಡರು ನಮ್ಮ ಗುಲ್ಬರ್ಗ ಜಿಲ್ಲೆಯಿಂದ ಬಂದಂತಹ ಹಿರಿಯ ರಾಜಕಾರಿಣಿಗಳು. ಇವರಿಬ್ಬರ ಬಗ್ಗೆ ಬೇರೆ ಬೇರೆ ವಿಂಗಡಿಸಿ ಮಾತನಾಡುವ ಅವಶ್ಯಕತೆ ಇಲ್ಲ. ಏಕೆಂದರೆ ಇಬ್ಬರಲ್ಲಿಯೂ ಅದೇ ಗುಣಗಳೇ ಇದ್ದವು. ಯಾವ ನೈಜ ಗುಣಗಳಿಗಾಗಿ ಅವರ ಜನರಲ್ಲಿ ಪ್ರಸಿದ್ಧಿಯನ್ನು ಪಡೆದಿದ್ದರು, ಅವರಿಬ್ಬರಲ್ಲಿಯೂ ಈ ಗುಣದ ಸಾಮ್ಯತೆ ಇತ್ತು. ಇವರಿಬ್ಬರೂ ಹೆಚ್ಚು ಓದಿದವರು ಅಲ್ಲ. ಶಂಕರಶೆಟ್ಟಿ ಪಾಟೀಲರು ಏಳನೇ ತರಗತಿಯವರೆಗೆ ಓದಿದವರು. ಶಿವಶೇಖರಪ್ಪಗೌಡರು 9ನೇ ತರಗತಿಯವರೆಗೆ

ಓದಿದವರು. ಆದರೂ ಕೂಡ ಅವರು ವಿಪರೀತ ಜನಪ್ರೀತಿಯನ್ನು ಹೊಂದಿದ್ದರು. ಬಹಳ ಸೌಜನ್ಯತೆ ಹಾಗೂ ವಿನಮ್ರಬಾವನೆ ಹೊಂದಿದ್ದರು. ಮನುಷ್ಯ ಸೌಜನ್ಯತೆಯಿಂದ ವಿನಮ್ರಭಾವನೆಯಿಂದ ಕೆಲಸ ಮಾಡಿದಾಗ ಸಾಮಾಜಿಕ ಕ್ಷೇತ್ರದಲ್ಲಿ ನಾವು ಎಂತೆಂತಹ ದೊಡ್ಡ ಕೆಲಸಗಳನ್ನು ಮಾಡಬಹುದು ಎಂಬುದಕ್ಕೆ ಇವರಿಬ್ಬರೂ ಉತ್ತಮ ನಿದರ್ಶನವಾಗಿದ್ದರು. ದಿ.ಶಂಕರಶೆಟ್ಟಿ ಪಾಟೀಲರು ಅನೇಕ ಸಲ ನಾವು ಅವರಿಗೆ ಬೇಟಿ ಆದಾಗ ಬಹಳ ಒಳ್ಳೊಳ್ಳೆಯ ಮಾತುಗಳನ್ನು ಹೇಳಿ ನಮಗೆ ಹುರಿದುಂಬಿಸುತ್ತಿದ್ದರು. ನಾನು Teacher's Constituency ಯಿಂದ ನಿಂತಾಗ ನಾನು ಅವರ ಊರಿಗೆ ಹೋಗುವುದಕ್ಕಿಂತ ಮೊದಲೇ, ನನಗೆ ಅವರಿಗೇ ಅಷ್ಟು ರಾಜಕೀಯವಾಗಿ ಪರಿಚಯ ಇರಲಿಲ್ಲ. ಆದರೂ ಕೂಡ ನನಗಿಂತ ಮೊದಲೇ ತಮ್ಮ ಎಲ್ಲಾ ಮತಕ್ಷೇತ್ರದಲ್ಲಿ ಕಲಾಪುರ ಮತಕ್ಷೇತ್ರದಲ್ಲಿ ಬರತಕ್ಕಂತಹ ಎಲ್ಲಾ ಹೈಸ್ಕೂಲ್‌ಗಳಿಗೆ ಭೇಟಿ ನೀಡಿ ಇವರಿಗೆ ಮತ ಹಾಕಬೇಕೆಂದು ಹೇಳಿಬಿಟ್ಟಿದ್ದರು. ಸಾಮಾಜಿಕವಾಗಿ ಕೆಲಸ ಮಾಡತಕ್ಕಂತಹವರ ಬಗ್ಗೆ ಸರಿಯಾಗಿ ತಿಳಿದುಕೊಂಡು ಯಾವ ರೀತಿ ಅವರಿಗೆ ಸಹಾಯ ಮಾಡಬೇಕು, ಪ್ರೋತ್ಸಾಹ ಕೊಡಬೇಕೆಂಬ ಮನೋಭಾವವನ್ನು ಹೊಂದಿದಂತಹ ಧುರೀಣರು ಅನಾರಾಗಿದ್ದರು. ಸೌಜನ್ಯ ವಿನಮ್ರತೆ ಮಾತು ಬಂದಾಗ ಏಸುಕ್ರಿಸ್ತರು ಬೈಬಲ್‌ನಲ್ಲಿ ಒಂದು ಮಾತನ್ನು ಎರಡು ಮೂರು ಕಡೆ ಪ್ರಸ್ತಾಪ ಮಾಡುತ್ತಾರೆ. 'The meek shall inherit the earth' ಯಾರು ಸಭ್ಯರಿರುತ್ತಾರೆ ಅವರು ಜಗತ್ತನ್ನೇ ಜಯಿಸಬಹುದು ಎಂದು ತಿಳಿದುಕೊಂಡು ಅವರು ಹೇಳುತ್ತಾರೆ. ಆದರೆ ರಾಜಕೀಯ ಕ್ಷೇತ್ರದಲ್ಲಿ ಹಾಗೆ ಇಲ್ಲ. ರಾಜಕೀಯ ಕ್ಷೇತ್ರದಲ್ಲಿ ಬೇರೆಯೇ ಪ್ರತೀತಿ ಇದೆ. rough and tuff muscle power ಅದು ಬಹಳ ಬೇಕಾಗುತ್ತದೆ ಎಂದು ಹೇಳುತ್ತಿರುತ್ತಾರೆ. ಅದು ತಪ್ಪು, ನಮ್ಮ ಶಂಕರ ಶೆಟ್ಟಿ ಮತ್ತು ಶಿವಶೇಖರಪ್ಪ ಗೌಡರ ರಾಜಕೀಯ ಜೀವನವನ್ನು ನಾವು ನೋಡಿದಾಗ, ಶಿವಶೇಖರಪ್ಪ ಗೌಡರಂತೂ ನನ್ನ ನೆರೆ ಮತಕ್ಷೇತ್ರದವರಾಗಿದ್ದು ಮೂರು ಸಾರಿ ಆರಿಸಿ ಬಂದಿದ್ದರು. ಈ ಸಾರಿ ಮೂರನೇ ಎರಡು ಭಾಗದಷ್ಟು ಶಹಾಪುರ ತಾಲ್ಲೂಕಿನ ಮತದಾರರು ಯಾದಗಿರಿ ಮತಕ್ಷೇತ್ರಕ್ಕೇ ಸೇರುತ್ತಾರೆ. ರಾಜಕೀಯವಾಗಿ ಅವರಿಗೆ ಸ್ವಲ್ಪ ಅನ್ಯಾಯವಾಯಿತು. ಅನ್ಯಾಯವಾಗಿಲ್ಲವೆಂದು ಹೇಳುವುದಕ್ಕೆ ಬರುವುದಿಲ್ಲ. ಆದರೂ ಕೂಡ ಅವರು

ತಮ್ಮ ಸಹಜ ಸ್ವಭಾವವನ್ನು ಬಿಡಲಿಲ್ಲ. ಎಲ್ಲರ ಜೊತೆಯಲ್ಲಿ ಚೆನ್ನಾಗಿ ಬದುಕಿದರು. ಜನರ ಪ್ರತಿನಿಧಿಯಾಗಿ ಏನು ಸೇವೆ ಕೊಡಬೇಕಾಗಿತ್ತು, ಅತ್ಯಂತ ಉತ್ತಮ ರೀತಿಯಿಂದ ಜನರ ಪ್ರೀತಿ ವಿಶ್ವಾಸ ಗಳಿಸಿ ಕೆಲಸ ಮಾಡಿದಂತಹ ಧುರೀಣರು. ನಾವೆಲ್ಲರೂ ಅವರು ಸತ್ತಂತಹ ರೀತಿಯನ್ನು ನೋಡಿದರೆ ಒಂದು ಮಾತನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಅವರು ಬಚ್ಚಲ ಮನೆಯಲ್ಲಿ ಸ್ನಾನ ಮಾಡುವುದಕ್ಕಾಗಿ ಹೋಗುವ ಸಮಯದಲ್ಲಿ ಬಿದ್ದರು. ವಯಸ್ಸಿನಲ್ಲಿ ನನಗಿಂತ 10 ವರ್ಷ ಚಿಕ್ಕವರು. ಅನೇಕ ಸಲ ನಾವೂ ಕೂಡ ಬಚ್ಚಲು ಮನೆಯಲ್ಲಿ ಬಿದ್ದಿರಬಹುದು. ಅದು ದೊಡ್ಡ fracture ಕೂಡ ಅಲ್ಲ. 'Crack in the neck of the femur', ಎಂದು ಇದೆ. ಆ ರಿಪೋರ್ಟ್ ನಾನೂ ನೋಡಿದ್ದೇನೆ. ಆದರೆ ಮರಣ ಹೇಗಾಯಿತು? ಸರ್ಕಾರಿ ಆಸ್ಪತ್ರೆಗಳಲ್ಲಿ ನೂರಾರು ಪೇಶೆಂಟ್‌ಗಳು ಬರುತ್ತಿರುತ್ತಾರೆ. ನಾವು ಸ್ವಲ್ಪ ಜಾಗೃತೆಯಿಂದ ಇರಬೇಕು. ಅದಕ್ಕಾಗಿ ನಾನು ವೈದ್ಯನಾಗಿರುವುದರಿಂದ ಈ ಮಾತನ್ನು ವಿಶೇಷವಾಗಿ ಹೇಳುತ್ತಿದ್ದೇನೆ. ಅದು ಸಣ್ಣ fracture ಆಗಿದೆ ಎಂದು ತಿಳಿದುಕೊಂಡು ಅವರು ತನ್ನ ಮತಕ್ಷೇತ್ರವಾದ ಶಹಾಪುರದಿಂದ ಗುಲ್ಬರ್ಗಾಕ್ಕೆ ಕುಳಿತೇ ಹೋದರು. ಯಾವುದಾದರೂ ಒಂದು fracture ಆದಾಗ ಅದನ್ನು immobilize ಮಾಡುತ್ತೇವೆ. ಅದು ಅಲುಗಾಡಬಾರದು ಎಂದು splint ಕೊಟ್ಟು ಮಾಡುತ್ತೇವೆ. ಆ ಘರ್ಷಣೆಯಿಂದ bleeding ಆಗಿ ಆ ರಕ್ತದಲ್ಲಿ fat content or fat bubble ಹೋಯಿತು ಎಂದರೆ, ಈ ರೀತಿ ದುರ್ಘಟನೆ ಆಗುತ್ತದೆ. ಅವರು ಗುಲ್ಬರ್ಗಾದಿಂದ ತಪಾಸಣೆ ಮಾಡಿಕೊಂಡು ಮುಂದಿನ ಇಲಾಜಿಗಾಗಿ ಮೀರಜ್‌ಗೆ ಹೋದರು, ಅವರ ಮಗ ನನಗೆ ಹೇಳಿದ, 13 ಕಿ.ಮಿ. ಇದ್ದಾಗ ಉಸಿರಾಟದಲ್ಲಿ ತೊಂದರೆ ಆಯಿತು, ಆ ಮೇಲೆ ಅವರು ಸತ್ತೇ ಹೋದರು ಎಂದು ಹೇಳಿದರು. ಅದಕ್ಕಾಗಿ ನಾವು fracture ಆದಾಗ ಇದು ಸಣ್ಣ fracture, ಇದು ಒಂದು ಸಣ್ಣ accident ಎಂದು ತಿಳಿದುಕೊಂಡು ನಾವು ಅಲಕ್ಷ್ಯ ಮಾಡಬಾರದು. ವೈದ್ಯ ಹೇಳಿದಂತೆ ನಾವು ಪಾಲನೆ ಮಾಡಬೇಕಾಗುತ್ತದೆ. ಅದೇ ರೀತಿಯಲ್ಲಿ ಬಿ.ಪಿ. ಕದಂರವರು, ಅಶ್ವಥ್‌ರವರು, ಚಿಂದೋಡಿ ಲೀಲಾ ರವರು, ಮತ್ತು ಬಿ.ವಿ. ವೈಕುಂಠರಾಜು ರವರು, ಅವರೂ ಕೂಡ ನಮ್ಮನ್ನು ಅಗಲಿದ್ದಾರೆ, ಅಗಲಿದ ಎಲ್ಲಾ ನೇತಾರರಿಗೆ

ಅಥವಾ ಧುರೀಣರಿಗೆ ನನ್ನ ಶ್ರದ್ಧಾಂಜಲಿಯನ್ನು ಸಲ್ಲಿಸಿ ನಾನು ತಮಗೆ ಧನ್ಯವಾದಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ತಾವು ಸದನದಲ್ಲಿ ಮಂಡಿಸಿರುವ ಈ ಸಂತಾಪ ಸೂಚನೆಯನ್ನು ಬೆಂಬಲಿಸುತ್ತಾ ನಮ್ಮನ್ನಗಲಿದ ಎಲ್ಲ ಹಿರಿಯ ಚೇತನಗಳಿಗೆ ನನ್ನ ಅಂತಿಮ ನಮನವನ್ನು ಕೂಡ ಸಲ್ಲಿಸುತ್ತೇನೆ. ಅವರುಗಳು ಈಗ ಸ್ವರ್ಗಸ್ಥರಾಗಿದ್ದಾರೆ. ಶ್ರೀಯುತ ಜ್ಯೋತಿಬಸುರವರು ನಮ್ಮ ರಾಷ್ಟ್ರದ ರಾಜಕಾರಣದಲ್ಲಿ ಹೇಗೆ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದರು ಎನ್ನುವಂಥದ್ದರ ಬಗ್ಗೆ ಎಲ್ಲರಿಗೂ ಗೊತ್ತಿರುವಂಥ ಸಂಗತಿಯೇ ಆಗಿದೆ. ನಾನು ಜ್ಯೋತಿಬಸುರವರನ್ನು ಒಳಗೊಂಡಂತೆ ಶ್ರೀಯುತ ಶಂಕರಶೆಟ್ಟಿಪಾಟೀಲ್‌ರವರು, ಶ್ರೀಯುತ ಶಿವಶೇಖರಪ್ಪ ಶಿರವಾಳ್‌ರವರು, ಶ್ರೀಯುತ ಕೆ.ಎಸ್. ಅಶ್ವಥ್‌ರವರು ಹಾಗೂ ವೈಕುಂಠರಾಜುರವರು ಮತ್ತು ಶ್ರೀಮತಿ ಚಿಂದೋಡಿ ಲೀಲಾರವರುಗಳ ಆತ್ಮಗಳಿಗೆ ಶಾಂತಿಯನ್ನು ಕೋರುತ್ತೇನೆ. ಮಾಜಿ ಸಂಸದರಾಗಿದ್ದಂಥ ಶ್ರೀಯುತ ಕದಂರವರು ನಮ್ಮ ಉತ್ತರ ಕನ್ನಡ ಜಿಲ್ಲೆಯವರು. ನಮ್ಮ ಶಾಸಕರಾಗಿ, ಸಂಸದರಾಗಿ ಅನೇಕ ಕೆಲಸ ಕಾರ್ಯಗಳನ್ನು ನಮ್ಮ ಜಿಲ್ಲೆಯ ಅಭಿವೃದ್ಧಿಯಲ್ಲಿ ಮಾಡಿದಂಥವರು. ಶ್ರೀಯುತ ಬಿ.ಪಿ. ಕದಂರವರು ವಿಧಾನಸಭೆಯ ಉಪಾಧ್ಯಕ್ಷರಾಗಿ, ಸಂಸದರಾಗಿ, ಶಾಸಕರಾಗಿದ್ದರು. ಅದರಲ್ಲಿಯೂ ವಿಶೇಷವಾಗಿ ಅವರು ಬಾಂಬೆ ವಿಧಾನಸಭೆಗೂ ಕೂಡ ಚುನಾಯಿತರಾಗಿದ್ದಂಥವರಾಗಿದ್ದರು. ಅಷ್ಟು ಹಿರಿಯರಾಗಿ ಕೆಲಸ ಕಾರ್ಯಗಳನ್ನು ಮಾಡಿರುವಂಥವರು ನಮ್ಮನ್ನಗಲಿರುವುದು ನಿಜವಾಗಿಯೂ ದು:ಖವಾಗುತ್ತದೆ ಮತ್ತು ಇಂಥ ಹಿರಿಯ ಅನುಭವಿ ಚೇತನಗಳನ್ನು ನಾವು ಹೇಗೆ ಕಳೆದುಕೊಳ್ಳುತ್ತಿದ್ದೇವೆ ಮತ್ತು ಆ ಎಲ್ಲಾ ಜವಾಬ್ದಾರಿಗಳನ್ನೆಲ್ಲಾ ಸಮಾಜದಲ್ಲಿರುವಂಥ ಬೇರೆ ಬೇರೆ ಸ್ಥಾನಗಳಲ್ಲಿರುವಂಥ ನಾವುಗಳು ಹೇಗೆ ತುಂಬಬೇಕಾಗಿದೆ ಎನ್ನುವ ಬಗ್ಗೆ ಅರಿವು ನಮಗೆಲ್ಲಾ ಮೂಡಿಸುತ್ತಿರುವಂಥದ್ದಾಗಿದೆ. ಬಿ.ಪಿ. ಕದಂರವರ ಜೊತೆ ನಾನು ಅನೇಕ ಸಂದರ್ಭಗಳಲ್ಲಿ ಅವರ ಒಡನಾಟದಲ್ಲಿ ಕೆಲಸ ಮಾಡಿದ್ದೇನೆ. ಅವರು ನೇರ ನುಡಿಯನ್ನು ಹೇಳುವಂತವರಾಗಿದ್ದರು. ನಾನು ಇತ್ತೀಚೆಗೆ ಹಲವು ವರ್ಷಗಳಲ್ಲಿ ಅವರನ್ನು ಭೇಟಿ ಮಾಡಿದಂಥ ಸಂದರ್ಭಗಳಲ್ಲಿ ನಮ್ಮ

ಜಿಲ್ಲೆಯ ಅಭಿವೃದ್ಧಿ ವಿಷಯದಲ್ಲಿ ಏನೇನು ಆಗಬೇಕು ಅಥವಾ ಏನೇನು ತೊಡಕುಗಳು ಆಗುತ್ತಿದೆ ಎನ್ನುವುದರ ಬಗ್ಗೆ ಅವರು ಸ್ಪಷ್ಟವಾದಂಥ ನೇರ ನುಡಿಗಳಲ್ಲಿ, ತಮ್ಮ ಕಟುವಾದಂಥ ಶಬ್ಧಗಳಲ್ಲಿ ಅವರು ನಮಗೆ ತಿಳಿಸುವಂಥವರಾಗಿದ್ದರು. ಇಂಥ ವ್ಯಕ್ತಿತ್ವವುಳ್ಳ ಹಿರಿಯರ ಅಗತ್ಯ ಇಂದು ಸಮಾಜಕ್ಕಿದೆ. ಯಾರು ಅನುಭವವನ್ನು ಹೊಂದಿರುತ್ತಾರೋ, ಯಾರಿಗೆ ಈ ಸಮಾಜದ ಆಗು ಹೋಗುಗಳ ಬಗ್ಗೆ ಸಂಪೂರ್ಣವಾದಂಥ ಅರಿವು ಇರುತ್ತದೋ ಅವರು ತಮ್ಮ ಸ್ಪಷ್ಟವಾದಂಥ ನುಡಿಗಳಲ್ಲಿ ಈ ಸಮಾಜಕ್ಕೆ ಹೇಳುವಂಥ ಅಗತ್ಯತೆ ಇದೆ ಹಾಗೂ ಅಂಥ ಇತರ ವ್ಯಕ್ತಿಗಳಿಗೆ ಇವುಗಳ ಬಗ್ಗೆ ತಿಳಿಸಬೇಕಾದಂಥ ಅಗತ್ಯತೆ ಇರುತ್ತದೆ. ಆ ಹಿರಿತನದಿಂದ ಆ ಅನುಭವವನ್ನು ಹೊಂದಿರುವಂಥವರು ಈ ರೀತಿ ನೇರ ನುಡಿಯನ್ನು ಆಡುವುದರಿಂದಾಗಿ ಸಮಾಜಕ್ಕೆ ಒಳ್ಳೆಯದಾಗುತ್ತದೆ ಅಥವಾ ಸರ್ಕಾರದ ಈ ನಮ್ಮ ವ್ಯವಸ್ಥೆಗಳಿಗೆ ಅದರಿಂದ ಅನುಕೂಲವಾಗುತ್ತದೆ. ಬಿ.ಪಿ. ಕದಂರವರು ಆ ರೀತಿಯ ವ್ಯಕ್ತಿತ್ವವನ್ನು ಹೊಂದಿದಂಥವರಾಗಿದ್ದರು. ಅವರು ಬಹಳ ಪ್ರಖರವಾದಂಥ ಲೇಖನಗಳನ್ನೂ ಕೂಡ ಬರೆದಂಥವರಾಗಿದ್ದರು. ಅದರಲ್ಲಿಯೂ ಕೂಡ ಅವರ ನೇರವಾದ ನುಡಿಗಳು, ಶಬ್ಧಗಳು ಇರುತ್ತಿದ್ದವು ಮತ್ತು ಅಂಥ ವಿಷಯಗಳೇ ಇರುತ್ತಿದ್ದವು. ಹೀಗಾಗಿ ಇಂಥ ಹಿರಿಯ ಅನುಭವಿಗಳ ಮಾರ್ಗದರ್ಶನ ನಮಗೆ ಇದುವರೆವಿಗೂ ಇತ್ತು. ಈಗ ನಮ್ಮ ನಾಡು ಹಿರಿಯರಾದಂಥ ಕದಂರವರನ್ನು ಕಳೆದುಕೊಂಡಿರುವುದರಿಂದಾಗಿ ಆ ಎಲ್ಲಾ ಕೊರತೆಗಳನ್ನು ನಾವೆಲ್ಲರೂ ತುಂಬಬೇಕಾದಂಥ ಅಗತ್ಯತೆ ಇದೆ. ಅವರ ಅಪೇಕ್ಷೆಯಂತೆ ನಾವು ಈ ಸಮಾಜವನ್ನು ಅಥವಾ ಸರ್ಕಾರದ ವ್ಯವಸ್ಥೆಯನ್ನು ಮುನ್ನಡೆಸಬೇಕಾದಂಥ ಜವಾಬ್ದಾರಿಕೆ, ಹೊಣೆಗಾರಿಕೆ ನಮ್ಮ ಮೇಲಿದೆ. ಆ ಧಿಕ್ಕಿನಲ್ಲಿ ನಾನು ಅವರ ಈ ಒಂದು ಸಾವಿನಿಂದಾಗಿ ಅವರು ಸ್ವರ್ಗಸ್ಥರಾಗಿರುವಂಥ ಹಿನ್ನಲೆಯಲ್ಲಿ ನಮ್ಮ ಜಿಲ್ಲೆಯಲ್ಲಿಯೂ ಕೂಡ ಅವರ ಕೊರತೆ ಇದೆ. ನಾನು ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ ಮತ್ತು ಉಳಿದೆಲ್ಲಾ ನಿಧನರಾದ ಹಿರಿಯರ ಆತ್ಮಗಳಿಗೆ ಶಾಂತಿಯನ್ನು ಕೋರುತ್ತಾ ನಾವೆಲ್ಲರೂ ಈ ಎಲ್ಲ ಹಿರಿಯರ ಅಪೇಕ್ಷೆಗಳನ್ನು ಈಡೇರಿಸುವಂಥ ದಿಕ್ಕಿನಲ್ಲಿ ನಮ್ಮ ಕೆಲಸ ಕಾರ್ಯಗಳನ್ನು, ಜವಾಬ್ದಾರಿಯಿಂದ ನಿರ್ವಹಿಸುವಂಥವರಾಗೋಣ. ಅದೇ ನಿಜವಾದಂಥ ಒಂದು ಇವತ್ತಿನ

ಸಂತಾಪದ ಸಂಕಲ್ಪವೆಂದು ಭಾವಿಸುತ್ತಾ ನನಗೆ ಇಂದು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕಾಕಾ ಸಾಹೇಬ್ ಪಾಂಡುರಂಗ ಪಾಟೀಲ್ (ನಿಪ್ಪಾಣಿ) : ಮಾನ್ಯ ಅಧ್ಯಕ್ಷರೆ, ತಾವೇನು ಇಂದು ಸದನದಲ್ಲಿ ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ ಅದಕ್ಕೆ ನಾನು ಬೆಂಬಲಿಸುತ್ತೇನೆ. ವಿಶೇಷವಾಗಿ ನಮ್ಮ ರಾಷ್ಟ್ರ ನಾಯಕರಾಗಿದ್ದಂಥ ಶ್ರೀ ಜ್ಯೋತಿಬಸುರವರು after emergency ಅವರು ಪಶ್ಚಿಮ ಬಂಗಾಳದ ಸಿ.ಎಂ. ಆದರು. ಆ ನಂತರ ಆ ಸ್ಥಾನವನ್ನು ಅಥವಾ ಆ ಪಕ್ಷದ ಸ್ಥಾನ ಇದುವರೆವಿಗೂ ಬೇರೆಯವರಿಗೆ ಹೋಗಲಿಲ್ಲ. ಅವರು ಜನರಿಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕಾರ್ಯವನ್ನು ಮಾಡುತ್ತಿದ್ದರು ಮತ್ತು ಜನರ ಸಮಸ್ಯೆಗಳಿಗೆ ಸ್ಪಂಧಿಸುವಂಥ ಕೆಲಸವನ್ನು ಜ್ಯೋತಿಬಸುರವರು ಮಾಡಿದ್ದರು. ನಮ್ಮ ರಾಜ್ಯದಲ್ಲಿ ಮಂಡಲ ಪಂಚಾಯತಿ ವ್ಯವಸ್ಥೆಯನ್ನು ದಿವಂಗತರಾದಂಥ ಮಾಜಿ ಮುಖ್ಯಮಂತ್ರಿ ರಾಮಕೃಷ್ಣಹೆಗಡೆಯವರು ತರುವ ಮುಂಚೆ ಪಶ್ಚಿಮ ಬಂಗಾಳದ ಮಾದರಿಯಲ್ಲಿ ಮಂಡಲ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ವ್ಯವಸ್ಥೆಯನ್ನು ತರಬೇಕೆನ್ನುವ ವಿಚಾರವನ್ನು ಅವರು ಮಾಡಿ ಆ ಕಾಲದಲ್ಲಿ ಈ ರೀತಿಯ ವ್ಯವಸ್ಥೆಯನ್ನು ತಂದರು. ಆನಂತರ 73–74 ರಲ್ಲಿ Amendment ಆದರೂ ಸಹಿತ ಪಶ್ಚಿಮ ಬಂಗಾಳದ ಒಂದು ರಾಜಕೀಯ ಸ್ಥಿತಿಯನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಅಲ್ಲಿದ್ದಂಥ ಮಂಡಳ ಪಂಚಾಯತಿ ವ್ಯವಸ್ಥೆ, ಜಿಲ್ಲಾ ಪಂಚಾಯತ್ ವ್ಯವಸ್ಥೆಯಲ್ಲಿ Grass root leadership strong ಇದೆ ಎನ್ನುವಂಥ ಒಂದು ಭಾವ ಎಲ್ಲರ ಕಡೆ ಬಂದು ಈ ದೇಶದ ಎಲ್ಲ ಕಡೆ ಈ ವ್ಯವಸ್ಥೆಗಾಗಿ ತಿದ್ದುಪಡಿಯನ್ನು ಆಗಿನ ಕಾಲದಲ್ಲಿ ತಂದು ತಿದ್ದುಪಡಿ ಆಯಿತು. ಅದಕ್ಕೆ ಜ್ಯೋತಿಬಸುರವರ ಎಡಪಂಗಡದ ವಿಷಯಗಳು ಇದ್ದರೂ ಕೂಡ ಅವರ ರಾಜಕೀಯ ಎಲ್ಲ ಕಡೆ ತೆಗೆದುಕೊಂಡು ಹೋಗುವುದು ಮತ್ತು ಆ ಮೂಲಕ ಒಳ್ಳೆಯ true gentlemen ಎನ್ನುವಂಥ ಭಾವನೆ ಅವರ ಬಗ್ಗೆ ಎಲ್ಲರಲ್ಲಿಯೂ ಇತ್ತು. ಒಮ್ಮೆ ಅವರನ್ನು ಭೇಟಿಯಾಗುವ ಅವಕಾಶ ನಮಗೆ ಸಿಕ್ಕಿತ್ತು. ಇನ್ನು ನಮ್ಮ ಕಾರವಾರದ ಬಿ.ಪಿ. ಕದಂರವರು ವಿಶೇಷವಾಗಿ 1976ನೇ ಇಸವಿಯಲ್ಲಿ ನಮ್ಮ

ನಿಪ್ಪಾಣಿ ಭಾಗದ ಕ್ಷೇತ್ರದಲ್ಲಿ ಇದ್ದಂಥ ಮಾಜಿ ಶಾಸಕರಾದ ರಘುನಾಥ ರಾವ್ ಕದಂರವರು ಏನು ಬಿ.ಪಿ. ಕದಂರವರ ಸಂಬಂಧಿಕರಾಗಿದ್ದರೋ ಅವರ ಮೂಲಕ ನಮಗೆ ಬಿ.ಪಿ. ಕದಂರವರ ಪರಿಚಯವಾಯಿತು. ಅವರು ಮೊದಲೇ ಬಾಂಬೆ ಅಸೆಂಬ್ಲಿಯಲ್ಲಿ ಅಥವಾ ಕರ್ನಾಟಕ ಅಸೆಂಬ್ಲಿಯಲ್ಲಿ, ಮೈಸೂರು ಅಸೆಂಬ್ಲಿಯಲ್ಲಿ ಎರಡು ಬಾರಿ ಅವರು ಭಾಷಾ ಸಮಸ್ಯೆಯಡಿಯಲ್ಲಿ ಅಥವಾ ಆ ಇಶ್ಯೂ ಮೇಲೆ ಆರಿಸಿ ಸದನದಲ್ಲಿ ಬಂದಿದ್ದರು. ಆದರೆ 1972ರಲ್ಲಿ ಕಾಂಗ್ರೆಸ್ ಶಾಸಕರಾಗಿ ಅವರು ಸದನಕ್ಕೆ ಪ್ರವೇಶ ಮಾಡಿದರು. ಏಕೆಂದರೆ main stream ನಲ್ಲಿ ಏನು ತೀರ್ಮಾನವಾಗಿಧೆಯೋ ಅದರ ಪ್ರಕಾರ ಹೋಗಬೇಕೆಂದು ಬಿ.ಪಿ. ಕದಂರವರು ಹೇಳಿದರು. ಅವರು ಸಂಸದರಾದಾಗ ಕೂಡ ನಾವು ಅವರಿಗೆ ನಿಪ್ಪಾಣಿಯಲ್ಲಿ ಸತ್ಕಾರ ಸಮಾರಂಭವನ್ನು ಇಟ್ಟಿದ್ದಾಗ ಅವರು ನಮಗೆಲ್ಲರಿಗೂ ಒಂದು ಗೈಡ್‌ಲೈನ್ಸ್ ಕೊಟ್ಟರು. ನೀವೆಲ್ಲರೂ main stream ನಲ್ಲಿ ಹೋಗಿ, ಏಕೆಂದರೆ ಅದರಿಂದಾಗಿಯೇ ಅಭಿವೃದ್ಧಿ ಸಾಧ್ಯ. ಈ ರೀತಿ ಅಭಿವೃದ್ಧಿ ಆದರೆ ಮಾತ್ರ ಈ ಜಗತ್ತಿನಲ್ಲಿ ನಮಗೆ ಮಾನ, ಮರ್ಯಾದೆ ಸಿಗುತ್ತದೆ. ನಮ್ಮ ಸಮಾಜ ಶಿಕ್ಷಣದಿಂದ ವಂಚಿತವಾದರೆ ಮತ್ತು ನಾವು ಕೇವಲ ಮರಾಠ ಸಮಾಜದವರು, ಶಿವಾಜಿ ಮಹಾರಾಜ್‌ದವರು ಎಂದು ಹೇಳಿಕೊಂಡು ಕೇವಲ ತಲವಾರ್ ತೆಗೆದುಕೊಂಡು ಹೋದರೆ ಇದರಿಂದ ಇವತ್ತಿನ ಪ್ರಜಾಪ್ರಭುತ್ವದಲ್ಲಿ ಏನು ಉಪಯೋಗವಾಗುವುದಿಲ್ಲವೆನ್ನುವ ಮಾತನ್ನು ಅವರು ಅಂದು ಹೇಳಿದ್ದರು. ನಾನು ಶಾಸಕನಾದಾಗಲೂ ಕೂಡ ಅವರನ್ನು ನಾನು ಭೇಟಿಯಾದಾಗ ಮತ್ತು ಅವರಿಂದ ಆಶೀರ್ವಾದವನ್ನು ಪಡೆದಾಗ ಕೂಡ ಇದೇ ಮಾತನ್ನು ಅವರು ಹೇಳಿದರು. ನೀನು ಯಾವಾಗಲೂ ಸಣ್ಣ ಮನಸ್ಸು ಇಟ್ಟುಕೊಂಡು ಹೋಗಬೇಡವೆಂದಿದ್ದರು. ನಿಧನರಾಗಿರುವ ಅವರಿಗೆ ನಾನು ಇಂದು ವಿಶೇಷವಾಗಿ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ. ಇನ್ನು ಅದೇ ಪ್ರಕಾರ ಚಿಂದೋಡಿ ಲೀಲಾರವರು ನನಗೆ ಪರೋಕ್ಷವಾಗಿ ಕನ್ನಡ ಬರುವಂತೆ ಮಾಡಿದವರು. ಏಕೆಂದರೆ ನನ್ನ ಮಾತೃಭಾಷೆ ಮರಾಠಿ. ಆದರೆ ನಾನು ಕನ್ನಡವನ್ನು ಕಲಿಯಬೇಕಾದರೆ ಅಥವಾ ನಾನು ಕನ್ನಡದಲ್ಲಿ ಮಾತನಾಡಲು ನನಗೆ ಧೈರ್ಯ ಬರುತ್ತಿದೆಯೆಂದರೆ ಅದಕ್ಕೆ ಕಾರಣ ಚಿಂದೋಡಿ ಲೀಲಾರವರು. ಏಕೆಂದರೆ

ಅವರು ಪ್ರತಿ ಬಾರಿ ಬೆಳಗಾಂಗೆ ಬಂದು ನಾಟಕವನ್ನು ಆಡುತ್ತಿದ್ದಾಗ ಪ್ರತಿ ಬಾರಿಯೂ ಕೂಡ ಅವರಿಗೆ ಕನ್ನಡವನ್ನು ಕಲಿಯುತ್ತೇನೆಂದು ಘೋಷಣೆ ಮಾಡಿ ಅವರ ನಾಟಕವನ್ನು ನೋಡಿ ಬರುತ್ತಿದ್ದೆ. ಇದರಿಂದಾಗಿ ನಾನು ಕನ್ನಡವನ್ನು ಕಲಿತೆ. ಆದರೆ ಈ ರೀತಿಯಲ್ಲಿ ದಿವಂಗತ ರಾಜ್‌ಕುಮಾರ್‌ರವರ ಪಿಕ್ಚರ್‌ನಿಂದ ಇರಬಹುದು ಅಥವಾ ವಿಷ್ಣುವರ್ಧನ್‌ರವರ ಪಿಕ್ಚರ್ ಇರಬಹುದು, ಅದಕ್ಕಿಂತಲೂ ಚಿಂದೋಡಿ ಲೀಲಾರವರ ನಾಟಕ ಖಾಯಂ ಆಗಿ ಬೆಳಗಾಂ ಗಡಿ ಭಾಗದಲ್ಲಿ, ಬೆಳಗಾಂ ಜಿಲ್ಲೆಯಲ್ಲಿ, ವಿಶೇಷವಾಗಿ ಆ ಕಡೆ ನಾಟಕ ಅಥವಾ ರಂಗಭೂಮಿಯಲ್ಲಿ ಕಲಾವಿದರು ಇರುವುದರಿಂದ ಯಾವ ರೀತಿಯಲ್ಲಿ ಬೇರೆ ಭಾಷೆಯಲ್ಲಿ ಮಾತನಾಡಬೇಕು ಮತ್ತು ಕನ್ನಡದಲ್ಲಿ ಮಾತನಾಡಬೇಕು ಎಂಬ ಬಗ್ಗೆ ಕನ್ನಡದಲ್ಲಿ ಬರೆಯುವುದಕ್ಕೆ ಮತ್ತು ಓದುವುದನ್ನು ಕಲಿಯದಿದ್ದರೂ ಕೂಡ ತಿಳಿದುಕೊಂಡಿದ್ದೇವೆ. ಏಕೆಂದರೆ ಈ ಒಂದು ರಂಗಭೂಮಿಯಲ್ಲಿ ಅಂಥ ಪ್ರಭಾವವಿರುತ್ತದೆ. ಇಂಥ ಚಿಂದೋಡಿ ಲೀಲಾರವರು ನಮ್ಮನ್ನಗಲಿದ್ದಾರೆ. ಅವರಿಗೂ ಮತ್ತು ಇತರ ಗಣ್ಯರು ಏನು ನಮ್ಮನಗಲಿದ್ದಾರೆ ಅವರಿಗೂ ಕೂಡ ಶ್ರದ್ಧಾಂಜಲಿಯನ್ನು ಅರ್ಪಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ರೇವುನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು): ಮಾನ್ಯ ಅಧ್ಯಕ್ಷರೆ, ತಾವೇನು ಈ ದಿನ ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ ಅದಕ್ಕೆ ನಾನು ಬೆಂಬಲಿಸುತ್ತೇನೆ. ಇವತ್ತು ಯಾವ ಗಣ್ಯರುಗಳು ನಮ್ಮನಗಲಿದ್ದಾರೆಂದರೆ, ಅವರಲ್ಲಿ ಶ್ರೀಯುತ ಜ್ಯೋತಿಬಸುರವರು, ಶ್ರೀಯುತ ಶಂಕರಶೆಟ್ಟಿ ಪಾಟೀಲ್‌ರವರು, ಶ್ರೀಯುತ ಶಿವಶೇಖರಪ್ಪ ಶಿರವಾಳ್‌ರವರು, ಕೆ.ಎಸ್. ಅಶ್ವಥ್‌ರವರು, ವೈಕುಂಠರಾಜುರವರು, ಶ್ರೀಮತಿ ಚಿಂದೋಡಿ ಲೀಲಾರವರು ಇದ್ದಾರೆ. ದಿವಂಗತ ಶಂಕರಶೆಟ್ಟಿ ಪಾಟೀಲ್‌ರವರು ನಮ್ಮ ಕ್ಷೇತ್ರದವರು. ಗಾಂಧಿವಾದಿ ಎನ್ನುವ ಹೆಸರನ್ನು ಅವರು ಪಡೆದಿದ್ದರು. ನಮಗೆ ಅವರು ಒಳ್ಳೆಯ ಮಾರ್ಗದರ್ಶಕರಾಗಿದ್ದರು. ಆದರೆ ನಿಷ್ಠಾವಂತ ಕಾಂಗ್ರೆಸ್ ಪಕ್ಷದ ಮುಖಂಡರಾಗಿದ್ದರು ಮತ್ತು ಅವರು ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದರು. ಎಲೆಕ್ಷನ್‌ನಲ್ಲಿ ಮಾತ್ರ ಅವರು ಕಾಂಗ್ರೆಸ್ ಅಭ್ಯರ್ಥಿ, ಆದರೆ ಎಲೆಕ್ಷನ್ ಆದ

ಬಳಿಕ ಅವರು ಸದಾ ನಮಗೆ ಮಾರ್ಗದರ್ಶನವನ್ನು ಕೊಡುತ್ತಿದ್ದರು. ಯಾವ ಯಾವ ಕೆಲಸವನ್ನು ಮಾಡಬೇಕು ಮತ್ತು ಏನು ಮಾಡಬೇಕು ಮತ್ತು ಹೇಗೆ ಮಾಡಬೇಕು ಎಂದು ಹೇಳುತ್ತಿದ್ದರು. ಅವರು ಯಾವಾಗಲೂ ಜನರ ಬಗ್ಗೆ ಚಿಂತನೆಯನ್ನು ಮಾಡುತ್ತಿದ್ದರು. ಎಲ್ಲ ಸಮಾಜದ ಜನರ ಮೆಚ್ಚುಗೆ ಗಳಿಸಿ ನಾಯಕತ್ವವನ್ನು ಉಳಿಸಿಕೊಂಡು ಒಳ್ಳೆಯ ಹೆಸರನ್ನು ಗಳಿಸಿಕೊಂಡಿದ್ದರು. ನಮ್ಮ ಭಾಗಕ್ಕೆ ಯಾರಾದರೂ ಬರಬೇಕಾದರೆ ಶ್ರೀಯುತ ಶಂಕರಶೆಟ್ಟಿ ಪಾಟೀಲ್‌ರವರ ಮಾರ್ಗದರ್ಶನ ಬಹಳ ಅವಶ್ಯಕತೆ ಎಂದು ತಿಳಿದುಕೊಂಡು ಅವರ ಮನೆಗೆ ಹೋದಾಗ ಸರಿಯಾಗಿ ಮಾತನಾಡಿ ಏನೇನು ಕೆಲಸ ಮಾಡುತ್ತಿದ್ದೀರಿ ಮತ್ತು ಯಾವ ಕೆಲಸಗಳನ್ನು ಹೇಗೆ ಮಾಡಬೇಕು ಎಂಬ ಬಗ್ಗೆ ಮಾರ್ಗದರ್ಶನವನ್ನು ಕೊಡುತ್ತಿದ್ದರು. ಅದರ ಜೊತೆಯಲ್ಲಿ ಯಾವಾಗಲಾದರೂ ತಿಂಗಳಿಗೊಮ್ಮೆ ಅವರ ಮನೆಗೆ ಹೋದಾಗ ಕೂಡ ಅವರು ನನಗೆ ಮಾರ್ಗದರ್ಶನ ಕೊಡುತ್ತಿದ್ದರು. ಆದರೆ ಒಂದು ಸಲ ಅವರೇ ಜೀಪ್‌ನಲ್ಲಿ ನಮ್ಮ ಮನೆಗೆ ಬರುತ್ತೇನೆಂದಾಗ ಆಗ ನಾನು ಅವರಿಗೆ ಹಿರಿಯರಾದ ನಿಮ್ಮಂಥವರ ಮನೆಗೆ ನಾನೇ ಬರುತ್ತೇನೆ. ನೀವೇಕೆ ಆ ಶ್ರಮ ತೆಗೆದುಕೊಳ್ಳುತ್ತೀರಿ ಎಂದಿದ್ದೆ. ಆದರೂ ಕೂಡ ಅವರು ಜೀಪ್‌ನಲ್ಲಿ ಬಂದು ದೊಡ್ಡ ಊರಿನಲ್ಲಿರುವ ಬಡವರ ಲಗ್ನವಾಗಬೇಕಾದರೆ ಮಂಗಳ ಕಾರ್ಯ ಮಾಡಬೇಕಾಗುತ್ತದೆ ಎನ್ನುವ ಪ್ರಸ್ತಾವವನ್ನು ಇಟ್ಟಾಗ, ಪಾಟೀಲರೆ ನೀವು ಹಿರಿಯರು, ನೀವು ಮಾರ್ಗದರ್ಶಕರಾಗಿದ್ದೀರಿ, ಆದರೆ ನೀವು ನಮ್ಮ ಮನೆಗೆ ಬರಬಾರದಾಗಿತ್ತು ಎಂದು ಹೇಳಿ, ನಾನು ಕೂಡ ಅವರ ಹೇಳಿದಂಥ ಮಂಗಲ್ ಕಾರ್ಯದ ಸಲುವಾಗಿ ಬೇಕಾದ ಕಟ್ಟಡಕ್ಕೆ 30 ಲಕ್ಷ ರೂ. ಖರ್ಚು ಮಾಡಿ ನಿರ್ಮಾಣ ಮಾಡುತ್ತಿದ್ದು ಅದು ಮುಗಿಯುವ ಹಂತದಲ್ಲಿದೆ.

12.10 ಪಿ.ಎಂ.

ನಮ್ಮ ಭಾಗವಾದ ಹೈದರಾಬಾದ್ ಕರ್ನಾಟಕಕ್ಕೆ ಕತ್ತಲು ಕವಿದಂತಾಗಿದೆ. ಅವರು ಒಳ್ಳೆಯ ನಾಯಕರಿದ್ದರು, ಮಾರ್ಗದರ್ಶಕ ರಾಗಿದ್ದರು, ಅವರ ನಿಧನದ ದು:ಖದಲ್ಲಿ ಪಾಲ್ಗೊಳ್ಳುತ್ತೇನೆ.

ಇನ್ನು ಮಾನ್ಯ ಶಿವಶೇಖರಪ್ಪಗೌಡ ಶಿರವಾಳ್‌ರವರು ಮನಸ್ಸಿನಲ್ಲಿ ಏನಿದ್ದರೂ ಕೂಡ ನಗುನಗುತ್ತಿದ್ದರು, ನನ್ನ ಜೊತೆಯಲ್ಲಿ ಬಹಳ ಆತ್ಮೀಯರಾಗಿದ್ದರು. ಅವರು ನಗುನಗುತ್ತಾ ಯಾವಾಗಲೂ ಜನರ ಬಗ್ಗೆ

ಚಿಂತನೆ ಮಾಡುತ್ತಿದ್ದರು. ಅವರು ಸೋತರೂ ನಗುತ್ತಿದ್ದರು, ಗೆದ್ದರೂ ನಗುತ್ತಿದ್ದರು. ಅವರು ಬಹಳ ಒಳ್ಳೆಯ ವ್ಯಕ್ತಿಯಾಗಿದ್ದರು. ಅವರ ಅಂತಿಮಕಾರ್ಯದಲ್ಲಿ ಪಾಲ್ಗೊಳ್ಳುವುದಕ್ಕಾಗಲಿಲ್ಲ. ಅವರಿಗೆ ಶ್ರದ್ಧಾಂಜಲಿ ಸಲ್ಲಿಸುವುದಕ್ಕೆ ಹೋದಾಗ ಅಲ್ಲಿದ್ದಂತಹ 10–20 ಸಾವಿರ ಜನರ ಕಣ್ಣಿನಲ್ಲಿ ನೀರು ಬರುತ್ತಿತ್ತು. ಅಂತಹ ಧೀಮಂತ ನಾಯಕರು ಇವತ್ತು ನಮ್ಮನ್ನು ಅಗಲಿದ್ದಾರೆ. ಇವತ್ತು ಏನು ಅನೇಕ ಗಣ್ಯ ನಾಯಕರು ಅಗಲಿದ್ದಾರೆ, ಅವರುಗಳ ಆತ್ಮಕ್ಕೆ ಶಾಂತಿ ಸಿಗಲಿ, ಅವರ ಮನೆಯವರಿಗೆ ಅವರ ಅಗಲಿಕೆಯ ದು:ಖವನ್ನು ಭರಿಸುವ ಶಕ್ತಿ ಕೊಡಲಿ ಎಂದು ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಅಧ್ಯಕ್ಷರೇ, ಅಗಲಿದ ಚೇತನಗಳಿಗೆ ಸಂತಾಪ ಸೂಚನಾ ನಿರ್ಣಯವನ್ನು ಏನು ತಂದಿದ್ದೀರಿ ಅದಕ್ಕೆ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ಭಾರತದ ರಾಜಕೀಯ ಇತಿಹಾಸದಲ್ಲಿ ಮರೆಯಲಾರದಂತಹ ಒಬ್ಬ ಮಹಾನ್ ವ್ಯಕ್ತಿತ್ವ ಎಂದರೆ ಮಾನ್ಯ ಜ್ಯೋತಿಬಸುರವರು. ಅಂದು ಪತ್ರಿಕೆಯಲ್ಲಿ ಜ್ಯೋತಿ ಇನ್ನಿಲ್ಲ, ಆರಿತು ಜ್ಯೋತಿ ಎಂದು ಹೆಸರು ಹೇಳುವಂತೆ, ಅವರು 23 ವರ್ಷಗಳ ಕಾಲ ಸತತವಾಗಿ ಮುಖ್ಯಮಂತ್ರಿಯಾಗಿ ರಾಜ್ಯದಲ್ಲಿ ಅಧಿಕಾರ ನಿರ್ವಹಣೆ ಮಾಡಬೇಕಾದರೆ, ಜನಮನ್ನಣೆಯನ್ನು ಗಳಿಸಬೇಕಾದರೆ ಅವರಲ್ಲಿ ಎಷ್ಟು ಸರಳತೆ, ವಿಶ್ವಾಸ ಮತ್ತು ನಂಬಿಕೆ ಜನಗಳಲ್ಲಿ ಇತ್ತು ಎಂದರೆ ಆಶ್ಚರ್ಯವಾಗುತ್ತದೆ. ಅವರಲ್ಲಿದ್ದಂತಹ ಸರಳತೆ ನಿಜವಾಗಲೂ ಯುವರಾಜಕಾರಣಿಗಳಿಗೆ, ರಾಜಕೀಯ ಪ್ರವೇಶ ಮಾಡಿರುವಂತಹವರಿಗೆ ಮತ್ತು ಅಧಿಕಾರದಲ್ಲಿರುವವರಿಗೆ ಅನುಕರಣೀಯ ಮತ್ತು ಆದರ್ಶನೀಯ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅವರು 2006ರಲ್ಲಿ ಅಧಿಕಾರದಲ್ಲಿ ಇದ್ದಾಗಲೇ ರಾಜಕೀಯ ನಿವೃತ್ತಿ ಹೊಂದುತ್ತೇನೆ ಎಂದು ತೆಗೆದುಕೊಂಡಂತಹ ನಿರ್ಣಯವು ಸಹ ಒಂದು ರೀತಿಯಾಗಿ ರಾಜಕೀಯದ ಕತ್ತಲಲ್ಲಿ ಒಂದು ಬೆಳಕು ಎಂದು ನಾನು ಭಾವಿಸುತ್ತೇನೆ.

ಇವತ್ತು ಶ್ರೀ ಕೆ.ಎಸ್. ಅಶ್ವಥ್‌ರವರು ನಿಧನರಾಗಿದ್ದಾರೆ, ಅವರ ಬಗ್ಗೆ ಹಲವಾರು ಜನ ಹಿರಿಯ ಸದಸ್ಯರು ಹೇಳಿದರು. ನಾನೂ ಕೂಡ ಅವರನ್ನು ಬಹಳ ಹತ್ತಿರದಿಂದ ನೋಡಿದ್ದೆನು. ಅವರ ವೈಯಕ್ತಿಕ ಜೀವನದಲ್ಲಿ

ಮತ್ತು ಚಿತ್ರರಂಗದಲ್ಲಿ ಬಹಳ ಶಿಸ್ತು ಇತ್ತು ಮತ್ತು ಬಹಳ ಸ್ವಾಭಿಮಾನಿಯಾಗಿದ್ದರು. ಅವರು ಯಾವುದೇ ಸಂದರ್ಭದಲ್ಲಿ ಸಹ ಅವರ ನೋವನ್ನು ವ್ಯಕ್ತಪಡಿಸದಿದ್ದರೂ ಸಹ ಒಮ್ಮೆ ಚಲನಚಿತ್ರ ರಂಗದಿಂದ ನಾನು ನಿವೃತ್ತಿ ಹೊಂದುತ್ತೇನೆಂದು ಘೋಷಣೆಯನ್ನು ಸಹ ಮಾಡಿದರು. ನಂತರ ಬಹಳಷ್ಟು ಜನ ಹಿರಿಯರೆಲ್ಲ ಹೋಗಿ ಏಕೆ ಇಂತಹ ನಿಲುವು ತೆಗೆದುಕೊಂಡಿರಿ ಎಂದು ಕೇಳಿಕೊಂಡಾಗ ಮತ್ತೆ ಅವರು ಚಿತ್ರರಂಗಕ್ಕೆ ಮರಳಿ ಬಂದರು. ಅವರು ಅಭಿನಯಿಸಿದಂತಹ 321 ಚಿತ್ರಗಳಲ್ಲಿ ಒಂದೊಂದು ಪಾತ್ರವೂ ಸಹ ಚೆನ್ನಾಗಿದ್ದು, ನಾಗರಹಾವು ಚಿತ್ರ ಎಷ್ಟು ಖ್ಯಾತಿ ಪಡೆದಿತ್ತೋ ಮುತ್ತಿನ ಹಾರ ಚಿತ್ರದ ಪೋಷಕ ಪಾತ್ರದಲ್ಲಿ ಸಹ ಅವರು ಜೀವ ತುಂಬಿರುವುದನ್ನು ನೋಡಿದರೆ ಮರೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಅವರು ಆಸ್ಪತ್ರೆಯಲ್ಲಿ ಸಾವು ಬದುಕಿನ ಮಧ್ಯೆ ಇದ್ದಾಗಲೂ ಸಹ ನಾನು ಮತ್ತೆ ಬಣ್ಣ ಹಾಕಬೇಕೆನ್ನುವ ಮಾತನ್ನು ಅವರು ಹೇಳುತ್ತಿದ್ದರು. ನಿಜವಾಗಲೂ ಅವರು ರಾಷ್ಟ್ರ ಪ್ರಶಸ್ತಿಗೆ ಅರ್ಹರಾದಂತಹ ಒಬ್ಬ ವ್ಯಕ್ತಿಯಾಗಿದ್ದರು. ಬಹುಶ: ಪದ್ಮಶ್ರೀಯಂತಹ ಪ್ರಶಸ್ತಿಯಾಗಿರಬಹುದು ಅಂತಹ ಒಬ್ಬ ಮಹಾನ್ ವ್ಯಕ್ತಿಗೆ ದೊರಕಬೇಕಾಗಿತ್ತು.

ಇನ್ನು ಈ ಸಂದರ್ಭದಲ್ಲಿ ಶ್ರೀಮತಿ ಚಿಂದೋಡಿ ಲೀಲಾರವರು ಅಷ್ಟೆ, ಕನ್ನಡನಾಡಿನಲ್ಲಿ ಎಷ್ಟೋ ಜನ ಮಹತ್ವದ ರಂಗಸಂಪನ್ನರಾಗಿ ಹೋಗಿದ್ದಾರೆ. ಮೈಸೂರು ದೊರೆಗಳಿಂದಲೂ ಸಹ ತಮ್ಮ ರಂಗಸೇವೆಗೆ ಚಿನ್ನದ ತೋಡ ಗಳಿಸಿದಂತಹ ವೀರಪ್ಪನವರ ಮನೆತನದ ಹೆಸರು ಉಳಿಸಿದಂತಹ, ಕನ್ನಡ ಗಡಿನಾಡಿನಲ್ಲಿ ಮರಾಠಿಗರನ್ನು ಎದುರಿಸಿ ಕನ್ನಡ ಬೆಳಗಾವಿ ನಗರ ಪಾಲಿಕೆಯ ಸದಸ್ಯರಾಗಿದ್ದರು ಎನ್ನುವುದು ಸಮರ್ಥನೀಯ. ಒಮ್ಮೆ ಬೆಂಗಳೂರು ಮಹಾನಗರ ಪಾಲಿಕೆಯ ಗುಬ್ಬಿ ರಂಗಮಂದಿರವನ್ನು ಇಷ್ಟು ದಿವಸಕ್ಕೆ ಗುತ್ತಿಗೆಗೆ ಬೇಕೆಂದು ಕೇಳುವುದಕ್ಕೆ ಬಂದಾಗ ಅವರು ಬೆಂಗಳೂರು ನಗರದಲ್ಲಿ ಹೆಚ್ಚು ರಂಗಮಂದಿರಗಳು ಬೇಕು ಎಂದು ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ ಬೆಂಗಳೂರಿನಲ್ಲಿ ಅವರ ಹೆಸರಿನಲ್ಲಿ ಅಥವಾ ಒಂದು ರಂಗಮಂದಿರವನ್ನು ಕಟ್ಟಿಸಿಕೊಟ್ಟರೆ, ವೃತ್ತಿ

ರಂಗಭೂಮಿಯಲ್ಲಿರುವಂತಹ ಒಂದು ಕಲಾವಿದರಿಗೆ ಪ್ರೋತ್ಸಾಹ ಕೊಟ್ಟಹಾಗೆ ಆಗುತ್ತದೆಂದು ಮನವಿ ಮಾಡಿಕೊಳ್ಳುತ್ತೇನೆ.

ಮಾನ್ಯ ಬಿ.ವಿ. ವೈಕುಂಠರಾಜು ಅವರು ಇನ್ನಿಲ್ಲ, ಅವರು ಬಹಳ ಛಲಗಾರರು, ಪತ್ರಿಕೋದ್ಯಮದಲ್ಲಿದ್ದರೂ ಸಹ ಬಹಳ ಸಾಹಸಿ, ಸ್ವಾಭಿಮಾನಿ. ಕೊನೆಗಾಲದಲ್ಲಿ ಪತ್ರಿಕೆ ನಡೆಸಬೇಕಾದರೆ ಬಹಳ ಕಷ್ಟವನ್ನು ಅನುಭವಿಸುತ್ತಿದ್ದನ್ನು ಬಹಳ ಹತ್ತಿರವಾಗಿ ನಾನು ಅವರ ಅಭಿಮಾನಿಯಾಗಿ ನೋಡಿದ್ದೇನೆ. ಅವರಿಗೂ ಕೂಡ ಸಂತಾಪ ಸೂಚನೆಯನ್ನು ವ್ಯಕ್ತಪಡಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಸವರಾಜು ಪಾಟೀಲ್ ಅಟ್ಟೂರು (ಬಸವ ಕಲ್ಯಾಣ): ಮಾನ್ಯ ಅಧ್ಯಕ್ಷರೇ, ತಾವು ಮಂಡನೆ ಮಾಡಿದಂತಹ ಸಂತಾಪ ಸೂಚನೆ ನಿರ್ಣಯಕ್ಕೆ ಬೆಂಬಲವನ್ನು ನಾನು ವ್ಯಕ್ತಪಡಿಸುತ್ತೇನೆ. ಬಹಳಷ್ಟು ಜನ ಮಹನೀಯರು, ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿಗಳಾದಂತಹ ಜ್ಯೋತಿಬಸುರವರು, ವಿಧಾನಸಭೆ ಮಾಜಿ ಸದಸ್ಯರಾಗಿದ್ದಂತಹ ಶ್ರೀ ಶಂಕರಶೆಟ್ಟಿ ಪಾಟೀಲ್‌ರವರು, ಶ್ರೀ ಶಿವಶೇಖರಪ್ಪಗೌಡ ಶಿರವಾಳ್‌ರವರು, ಮಾಜಿ ಸಂಸದರಾದಂತಹ ಬಿ.ಪಿ. ಕದಂರವರು, ಕನ್ನಡ ಚಲನಚಿತ್ರರಂಗದ ಪೋಷಕ ನಟರಾಗಿದ್ದಂತಹ ಶ್ರೀ ಕೆ.ಎಸ್. ಅಶ್ವಥ್‌ರವರು, ರಂಗಭೂಮಿಯ ನಟಿಯಾಗಿದ್ದಂತಹ ಶ್ರೀಮತಿ ಚಿಂದೋಡಿ ಲೀಲಾ ಹಾಗೂ ಖ್ಯಾತ ಪತ್ರಕರ್ತರಾಗಿದ್ದ ಶ್ರೀ ಬಿ.ವಿ. ವೈಕುಂಠರಾಜು ನಿಧನಕ್ಕೆ ಸಂತಾಪವನ್ನು ವ್ಯಕ್ತಪಡಿಸುತ್ತೇನೆ.

ಮಾನ್ಯ ಜ್ಯೋತಿಬಸುರವರ ಬಗ್ಗೆ ಹೇಳಬೇಕೆಂದರೆ ಅವರು ಬಹಳ ದೊಡ್ಡ ವ್ಯಕ್ತಿಯಾಗಿದ್ದರು. ನಮ್ಮ ರಾಷ್ಟ್ರದ ರಾಜಕಾರಣದಲ್ಲಿ ಅಮೂಲ್ಯವಾದ ಸೇವೆಯನ್ನು ಸಲ್ಲಿಸಿದಂತಹ ಒಬ್ಬ ರಾಷ್ಟ್ರೀಯ ನಾಯಕರು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನಮ್ಮ Legislature Committee ಮೊನ್ನೆ ಕೊಲ್ಕತ್ತಾಗೆ ಹೋದಾಗ ಅಲ್ಲಿ ಅವರನ್ನು ನೋಡುವಂತಹ ಒಂದು ಅವಕಾಶ ದೊರೆತಿತ್ತು. ಅಲ್ಲಿ Communist ಪಕ್ಷದ cadre, ಸಿದ್ಧಾಂತ ನೋಡಿದರೆ, ಅವರು ಬಹಳ simple ಆದಂತಹ ಜನರು. ಅಲ್ಲಿನ ಜನ ಮತ್ತು ಮಂತ್ರಿಮಂಡಲದಲ್ಲಿ ಇರುವಂತಹ ಜನರಿಗೆ ಸಣ್ಣ ಮನೆಗಳು ಇದ್ದು, ಅವರ ಸಂಸ್ಕೃತಿ ಏನಿದೆ, ಅದು ನನ್ನ ಮೇಲೆ ಬಹಳ ಪ್ರಭಾವ ಬೀರಿತು ಎಂದು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಜ್ಯೋತಿಬಸುರವರಿಗೆ ಕಾಂಗ್ರೆಸ್ಸೇತರ ಪ್ರಧಾನ ಮಂತ್ರಿ

ಸ್ಥಾನಕ್ಕೆ ಕರೆದು ಕೂರಿಸಿದರೂ ಕೂಡ ಬೇಡ ಎಂದು ಹೇಳುವಂತಹ ಒಬ್ಬ ಅಪ್ಪಟ ನಿಷ್ಕಂಳಕ ರಾಜಕಾರಣಿ ಎಂದು ಹೇಳಿದರೂ ತಪ್ಪಿಲ್ಲ. ಅವರ ನಿಧನದಿಂದ ನಮ್ಮ ರಾಷ್ಟ್ರ ಅನಾಥವಾಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅಂತಹ ವ್ಯಕ್ತಿಗಳು ರಾಷ್ಟ್ರೀಯ ಮಾರ್ಗದರ್ಶಕರಾಗಿ ಇರಬೇಕಾಗಿತ್ತು.

ಅದೇ ರೀತಿ ಮಾನ್ಯ ಶಂಕರ್‌ಶೆಟ್ಟಿ ಪಾಟೀಲ್‌ರವರು ನಮ್ಮ ಪಕ್ಕದ ಮತಕ್ಷೇತ್ರದವರು. ಮಾನ್ಯ ರೇವು ನಾಯಕ್ ಬೆಳಮಗಿಯವರು ಹೇಳಿದ ಹಾಗೆ ಅವರು ಬಹಳ ಅಪ್ಪಟ ಗಾಂಧಿವಾದಿ, ಪ್ರಾಮಾಣಿಕ ವ್ಯಕ್ತಿಗಳು. ಅವರು ಇವತ್ತಿನವರೆಗೂ ಕೂಡ ಕೊಡೆ ಹಿಡಿದುಕೊಂಡು ಬಸ್ಸಿನಲ್ಲಿ ಓಡಾಡುತ್ತಿದ್ದರು. ಅವರಿಗೆ 75 ವರ್ಷವಾದರೂ ಕೂಡ ನಮ್ಮ ಊರಿಗೆ ಕೆರೆ ಮಾಡಿಕೊಡಿ, ನಮ್ಮ ಊರಿಗೆ ಆಸ್ಪತ್ರೆ ಮಾಡಿಕೊಡಿ, ನಮ್ಮ ಊರಿಗೆ ರಸ್ತೆಗಳು ಇಲ್ಲ ಎಂದು ಹೇಳುತ್ತಿದ್ದರು. ಅವರು ನಿಷ್ಕಳಂಕಿತ ರಾಜಕಾರಣಿಗಳು. ಅವರು ಬಹಳ ಪ್ರಾಮಾಣಿಕ ವ್ಯಕ್ತಿಯಾಗಿದ್ದರು, ಕೇವಲ ಕಮಲಾಪುರ ಮತಕ್ಷೇತ್ರ ಅಷ್ಟೇ ಅಲ್ಲ, ಬೇರೆ ಬೇರೆ ಕಡೆಯಲ್ಲಿ ಕೂಡ ಒಳ್ಳೆಯ ಕೆಲಸವನ್ನು ಮಾಡಿದಂತಹ ಒಬ್ಬ ರಾಜಕಾರಣಿ, ನಮ್ಮ ಭಾಗದಲ್ಲಿ ಒಬ್ಬ ಧೀಮಂತ ರಾಜಕಾರಣಿ. ಹೈದರಾಬಾದ್ ಕರ್ನಾಟಕದಲ್ಲಿ ವಿಶೇಷವಾಗಿ ಮಾನ್ಯ ಶಂಕರಶೆಟ್ಟಿ ಪಾಟೀಲ್ ಎಂದರೆ ಒಬ್ಬ ಪ್ರಾಮಾಣಿಕ ವ್ಯಕ್ತಿಗಳು. ಅಂತಹವರ ಅಗಲಿಕೆಯಿಂದ ನಮ್ಮ ಭಾಗಕ್ಕೆ ತುಂಬಲಾರದಂತಹ ನಷ್ಟವಾಗಿದೆ ಎಂದು ಹೇಳುವುದಕ್ಕೆ ದು:ಖವಾಗುತ್ತದೆ.

ಅದೇ ರೀತಿ ನಮ್ಮ ಸ್ನೇಹಿತರಾದಂತಹ ಶ್ರೀ ಶಿವಶೇಖರಪ್ಪಗೌಡ ಪಾಟೀಲ್‌ರವರು ಶಹಾಪೂರ ಮತಕ್ಷೇತ್ರದಿಂದ ಚುನಾವಣೆಯಲ್ಲಿ ಗೆದ್ದುಬಂದವರು. ಅವರು ಬಹಳ ಒಳ್ಳೆಯ ವ್ಯಕ್ತಿಗಳಾಗಿದ್ದರು. ಅವರು ಯಾವಾಗಲೂ ಹಸನ್ಮುಖಿಗಳು, ಅವರನ್ನು ಯಾವಾಗ ಕರೆದರೂ ಕೂಡ ಶಹಾಪೂರದಿಂದ ಬರುವಾಗ ಜೋಳದ ರೊಟ್ಟಿ ಹಿಂಡಿ, ಚಟ್ನಿಯನ್ನು ಮಾಡಿಕೊಂಡು ಬರುತ್ತಿದ್ದರು. ಶಾಸಕರ ಭವನದಲ್ಲಿ ಎಲ್ಲಾ ಶಾಸಕರನ್ನು ಕರೆದು ಊಟ ಮಾಡಿಸುತ್ತಿದ್ದರು. ಅವರು ಬಹಳಷ್ಟು ಪ್ರಗತಿಪರವಾದಂತಹ ಕೆಲಸವನ್ನು ಮಾಡಿದಂತಹ ವ್ಯಕ್ತಿಗಳು. ಅಂತಹವರ ಅಗಲಿಕೆಯಿಂದ ಶಹಾಪೂರ ಕ್ಷೇತ್ರ ಅಷ್ಟೆ ಅಲ್ಲ, ಇಡೀ ಕರ್ನಾಟಕ ಬಡವಾಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಮಾನ್ಯ ಕೆ.ಎಸ್. ಅಶ್ವಥ್‌ರವರು ಕನ್ನಡ ಚಿತ್ರರಂಗದಲ್ಲಿ ಒಳ್ಳೆಯ ಹೆಸರು ಪಡೆದಂತಹವರು. ನಾವು ಅವರನ್ನು ಬಸವ ಕಲ್ಯಾಣದ ಒಂದು ಕಾರ್ಯಕ್ರಮಕ್ಕೆ ಆಹ್ವಾನ ಮಾಡುವುದಕ್ಕೆ ಹೋದಾಗ ಅವರು ಬಸವಣ್ಣನ ತತ್ವಗಳ ವಿಚಾರಗಳ ಮೇಲೆ ಹದಿನೈದು ಭಾಷೆಗಳಲ್ಲಿ ಸಂಗೀತ ನಿರೂಪಣೆ ಮಾಡಿದಂತಹವರು. ಅವರು ಒರಿಸ್ಸಾ ಭಾಷೆಯಲ್ಲಿ, ತಮಿಳು ಭಾಷೆಯಲ್ಲಿ, ಪಂಜಾಬಿ ಭಾಷೆಯಲ್ಲಿ ಬಸವಣ್ಣನವರ ತತ್ವಗಳು ಮತ್ತು ವಚನಗಳ ಬಗ್ಗೆ ಅದೇ concept ನಲ್ಲಿ ಬೇರೆ ಬೇರೆ ದಾಟಿಯಲ್ಲಿ ಅವರು ಸಂಗೀತವನ್ನು ಹಾಡಿ ತೋರಿಸುತ್ತಿದ್ದರು. ಅವರೂ ಕೂಡ ಒಳ್ಳೆಯ ವ್ಯಕ್ತಿಗಳು.

ಶ್ರೀಮತಿ ಚಿಂದೋಡಿ ಲೀಲಾರವರು ಹಾಗೂ ಶ್ರೀ ಬಿ.ವಿ. ವೈಕುಂಠ ರಾಜುರವರು ಅವರದೇ ಆದಂತಹ ಕ್ಷೇತ್ರದಲ್ಲಿ ಗಣನೀಯವಾದಂತಹ ಸೇವೆ ಸಲ್ಲಿಸಿದಂತಹ ಮಹನೀಯರು. ಅವರು ನಮ್ಮನ್ನಗಲಿ ಹೋಗಿದ್ದಾರೆ. ಅವರ ನಿಧನದಿಂದ ತುಂಬಲಾರದಂತಹ ನಷ್ಟವಾಗಿದೆ. ಅವರ ದು:ಖದಲ್ಲಿ ನಾವೆಲ್ಲ ಸಹಭಾಗಿಯಾಗಿದ್ದೇವೆ. ದೇವರು ಅವರ ಮನೆಯವರಿಗೆ ಅವರ ನಿಧನದ ದು:ಖವನ್ನು ಸಹಿಸುವ ಶಕ್ತಿಯನ್ನು ನೀಡಲಿ ಎಂದು ಪ್ರಾರ್ಥನೆ ಮಾಡುತ್ತೇನೆ. ಮಾನ್ಯ ಅಧ್ಯಕ್ಷರು ಇವತ್ತು ಸಂತಾಪ ಸೂಚನೆ ನಿರ್ಣಯದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ದೊಡ್ಡಪ್ಪಗೌಡ ಶಿವಲಿಂಗಪ್ಪಗೌಡ ಪಾಟೀಲ್ ನರಿಬೋಳ (ಜೇವರ್ಗಿ) : ಮಾನ್ಯ ಅಧ್ಯಕ್ಷರೇ, ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿಯಾಗಿದ್ದ ಜ್ಯೋತಿಬಸು ಹಾಗೂ ವಿಧಾನಸಭೆಯ ಮಾಜಿ ಸದಸ್ಯರುಗಳಾಗಿದ್ದ ಶ್ರೀ ಶಂಕರಶೆಟ್ಟಿ ಪಾಟೀಲ್ ಹಾಗೂ ಶಹಾಪೂರದ ಶಾಸಕರಾದ ಶ್ರೀ ಶಿವಶೇಖರಪ್ಪ ಗೌಡ ಶಿರವಾಳ್, ಮಾಜಿ ಸಂಸದರಾಗಿದ್ದ ಶ್ರೀ ಬಿ.ಪಿ. ಕದಂ, ಕನ್ನಡ ಚಲನಚಿತ್ರ ರಂಗದ ಪೋಷಕ ನಟರಾಗಿದ್ದ ಕೆ.ಎಸ್. ಅಶ್ವಥ್, ರಂಗಭೂಮಿಯ ನಟಿಯಾಗಿದ್ದ ಶ್ರೀಮತಿ ಚಿಂದೋಡಿ ಲೀಲಾ ಹಾಗೂ ಖ್ಯಾತ ಪತ್ರಕರ್ತರಾಗಿದ್ದ ಶ್ರೀ ಬಿ.ವಿ. ವೈಕುಂಠರಾಜುರವರ ನಿಧನದ ಪ್ರಯುಕ್ತ ಇವತ್ತು ತಂದಿರುವ ಸಂತಾಪ ಸೂಚನಾ ನಿರ್ಣಯವನ್ನು ಬೆಂಬಲಿಸುತ್ತೇನೆ.

ಶ್ರೀ ಶಿವಶೇಖರಪ್ಪಗೌಡ ಶಿರವಾಳ್‌ರವರು (ಜೇವರ್ಗಿ), ಯಾದಗಿರಿ ಮತ್ತು ಸುರಪುರ ಮಧ್ಯದಲ್ಲಿರುವಂಥ ಶಹಾಪುರ ವಿಧಾನ ಸಭಾ ಕ್ಷೇತ್ರದಲ್ಲಿ ಮೂರು ಬಾರಿ ಶಾಸಕರಾಗಿ ಚುನಾಯಿತರಾಗಿದ್ದರು. ಇವರು ಸರಳ, ಸಜ್ಜನಿಕೆಯ ವ್ಯಕ್ತಿಯಾಗಿದ್ದರು. ಇವರು ದೀನ ದಲಿತರಿಗೆ, ಕಡುಬಡವರಿಗೆ ದಾನ ಮಾಡುವಂಥ ದಾನಶೂರರು ಆಗಿದ್ದರು. ನಾವು ಇವತ್ತು ಇಂಥ ಒಬ್ಬ ಸರಳ ಸಜ್ಜನಿಕೆಯ ವ್ಯಕ್ತಿಯನ್ನು ಕಳೆದುಕೊಂಡಿದ್ದೇವೆ. ಗುಲ್ಬರ್ಗ ಜಿಲ್ಲೆಯಲ್ಲಿ ಧಾರ್ಮಿಕ ಕ್ಷೇತ್ರದಲ್ಲೂ ಸಹ ಇವರು ಹೆಚ್ಚಿನ ಸೇವೆಯನ್ನು ಸಲ್ಲಿಸಿದಂಥ ವ್ಯಕ್ತಿಯೂ ಆಗಿದ್ದರು. ಇವರು ಕೆಲವು ದಿವಸಗಳ ಹಿಂದೆ ನಮ್ಮ ಭಾರತೀಯ ಜನತಾ ಪಕ್ಷಕ್ಕೆ ಸೇರ್ಪಡೆಯಾಗಿ, ದೇವದುರ್ಗದ ಉಪ ಚುನಾವಣೆಯಲ್ಲಿ ಮತ್ತು ಕಳೆದ ಬಾರಿಯ ಲೋಕಸಭೆಯ ಚುನಾವಣೆಯಲ್ಲಿ ಪಕ್ಷದ ಗೆಲುವಿಗೆ ಶ್ರಮಿಸಿದಂಥ ವ್ಯಕ್ತಿಯಾಗಿದ್ದರು. ಇಂಥವರ ಕುಟುಂಬ ವರ್ಗಕ್ಕೆ ಮತ್ತು ಅವರ ಅಭಿಮಾನಿಗಳಿಗೆ ದು:ಖವನ್ನು ಸಹಿಸುವಂಥ ಶಕ್ತಿಯನ್ನು ಭಗವಂತನು ಕೊಡಲಿಯೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಶಹಾಪುರ ಪಟ್ಟಣದಲ್ಲಿ ಬಹಳಷ್ಟು ಜನರ ಬೇಡಿಕೆ ಏನೆಂದರೆ, ಈ ಪಟ್ಟಣದಲ್ಲಿ ಅವರ ಪುತ್ಥಳಿಯನ್ನು ಅನಾವರಣ ಮಾಡಬೇಕೆಂಬ ಬೇಡಿಕೆಯನ್ನು ಇಟ್ಟಿದ್ದಾರೆ. ಇವರು ಮೂರು ಬಾರಿ ಇಲ್ಲಿ ಶಾಸಕರಾಗಿದ್ದರಿಂದ ಶಹಾಪುರದಲ್ಲಿ ಅವರ ಪುತ್ಥಳಿಯನ್ನು ನಿರ್ಮಾಣ ಮಾಡಲು ಸರ್ಕಾರದ ವತಿಯಿಂದ ಸಹಕಾರ ನೀಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದೇ ರೀತಿಯಲ್ಲಿ ಹಿರಿಯರಾದ ಶ್ರೀ ಶಂಕರಶೆಟ್ಟಿ ಪಾಟೀಲ್‌ರವರು ಗುಲ್ಬರ್ಗಾ ಜಿಲ್ಲೆಯ ಕಾಳಗಿ ಕ್ಷೇತ್ರದಿಂದ ವಿಧಾನಸಭೆಗೆ ಚುನಾಯಿತರಾಗಿದ್ದು, ಆ ಭಾಗದ ಗಾಂಧಿ ಎಂದೇ ಹೆಸರುವಾಸಿಯಾಗಿದ್ದರು. ಹಿರಿಯರಾದ ಮಾನ್ಯ ರೇವುನಾಯಕ್ ಬೆಳಮಗಿಯವರು ಮತ್ತು ಮಾನ್ಯ ಬಸವರಾಜ ಪಾಟೀಲ್ ಅಟ್ಟೂರ್‌ರವರು ಇವರ ಬಗ್ಗೆ ಹೆಚ್ಚಿಗೆ ಹೇಳಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಮತ್ತು ಅವರ ಕುಟುಂಬ ವರ್ಗದವರಿಗೆ ದು:ಖ ಭರಿಸುವ ಶಕ್ತಿಯನ್ನು ಕೊಡಲಿಯೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ. ತಾವು ತಂದಿರುವ ಈ ಸಂತಾಪ ಸೂಚನೆಗೆ ಬೆಂಬಲವನ್ನು ವ್ಯಕ್ತಪಡಿಸಿ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕೆ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ): ಮಾನ್ಯ ಅಧ್ಯಕ್ಷರೆ, ತಾವು ತಂದಿರುವ ಸಂತಾಪ ಸೂಚನಾ ನಿರ್ಣಯವನ್ನು ಸ್ವಾಗತಿಸುತ್ತೇನೆ. ನಮ್ಮನ್ನೆಲ್ಲಾ ಅಗಲಿದಂಥ ಅನೇಕ ಮಹನೀಯರಿಗೆ ಈ ಸಭೆ ಸಂತಾಪವನ್ನು ಸೂಚಿಸುತ್ತಿದೆ. ಅದರಲ್ಲೂ ದಿವಂಗತ ಮಾನ್ಯ ಜ್ಯೋತಿಬಸುರವರನ್ನು ಈ ರಾಷ್ಟ್ರ ಕಂಡ ಅಪ್ರತಿಮ ರಾಜಕಾರಣಿಯಾಗಿ, ಒಬ್ಬ ಸ್ವಾತಂತ್ರ್ಯ ಹೋರಾಟಗಾರರಾಗಿ, ಒಬ್ಬ ಉತ್ತಮ ಆಡಳಿತಗಾರನಾಗಿ, ಇತರ ಎಲ್ಲಾ ಯುವಕರಿಗೆ ಮತ್ತು ದೇಶಕ್ಕೆ ಮಾದರಿಯಾಗಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಸುಮಾರು 70 ವರ್ಷಗಳ ಕಾಲ ರಾಜಕೀಯ ಕ್ಷೇತ್ರದಲ್ಲಿ ಭಾಗಿಯಾಗಿ ರಾಜಕಾರಣ ಮಾಡಿದರು, ಎನ್ನುವುದಕ್ಕಿಂತ ಹೆಚ್ಚಾಗಿ ಒಬ್ಬ ಮುತ್ಸದ್ಧಿ ರಾಜಕಾರಣಿಯಾಗಿ, ಒಬ್ಬ ಸೇನಾನಿಯಾಗಿ, ಒಬ್ಬ ಉತ್ತಮ ಆಡಳಿತಗಾರನಾಗಿ, ನಮಗೆಲ್ಲರಿಗೂ ಮಾರ್ಗದರ್ಶಿಯಾಗಿದ್ದಾರೆ. ಅವರ ಮಾರ್ಗದರ್ಶನ ನಮ್ಮ ಉತ್ತಮ ಆಡಳಿತಕ್ಕೆ ಅನುಕೂಲವಾಗಲಿಯೆಂದು ಹೇಳುತ್ತೇನೆ. ಇವತ್ತು ಇರುವಂಥ ರಾಜಕೀಯ ಅಸ್ಥಿರತೆಯಲ್ಲಿ ಅವರು ಸತತವಾಗಿ 23 ವರ್ಷಗಳ ಕಾಲ ಮುಖ್ಯಮಂತ್ರಿಯಾಗಿದ್ದರು, ಆ ಪಕ್ಷದ ನಾಯಕರಾಗಿದ್ದರೆಂದರೆ, ನಾವೆಲ್ಲರೂ ಹೆಮ್ಮೆ ಪಡಬೇಕು. ಅದಕ್ಕೆ ಆನೇಕ ಕಾರಣಗಳು ಇವೆ. ಅದು ಅವರ ಪಕ್ಷದ ಶಿಸ್ತು ಇರಬಹುದು, ಅವರ ಆಡಳಿತ ವೈಖರಿ, ಅವರ ಕಾರ್ಯಕ್ರಮಗಳು, ಇವೆಲ್ಲಾ ಕಾರಣವಾಗಿರುತ್ತದೆಂಬ ಮಾತನ್ನು ಹೇಳುತ್ತೇನೆ. ಇವರ ಜೊತೆಗೆ ನಮ್ಮ ರಾಜ್ಯದ ಶಾಸಕರಾಗಿದ್ದಂಥ ಶ್ರೀ ಶಂಕರಶೆಟ್ಟಿ ಪಾಟೀಲ್‌ರವರು, ಶ್ರೀ ಶಿವಶೇಖರಪ್ಪಗೌಡ ಶಿರವಾಳ್‌ರವರು, ಶ್ರೀ ಬಿ.ಪಿ.ಕದಂರವರು, ಹೀಗೆ ಆನೇಕ ಜನರು ನಮ್ಮನ್ನು ಅಗಲಿದ್ದಾರೆ. ಇವರುಗಳು ತಮ್ಮ ಆಡಳಿತದ ಅವಧಿಯಲ್ಲಿ ಶ್ರದ್ಧೆಯಿಂದ ಕೆಲಸವನ್ನು ಮಾಡಿದ್ದಾರೆ. ಇನ್ನು ಚಲನಚಿತ್ರ ನಟರಾಗಿದ್ದಂಥ ಶ್ರೀ ಕೆ.ಎಸ್.ಅಶ್ವಥ್‌ರವರು ಪೋಷಕ ನಟರಾಗಿರಬಹುದು. ಆದರೆ ಯಾವುದೇ ನಾಯಕ ನಟರಿಗೂ ಕಡಿಮೆ ಇಲ್ಲದ ರೀತಿಯಲ್ಲಿ ಜನಪ್ರಿಯತೆಯನ್ನು ಹೊಂದಿದ್ದರು. ನಾನು ಸಚಿವನಾಗಿದ್ದಾಗ ಒಂದು ಸಾರಿ ಮೈಸೂರಿನಲ್ಲಿ ಅವರಿಗೆ ಸನ್ಮಾನ ಮಾಡಲು ಹೋಗಿದ್ದಾಗ, ಅವರಿಗೆ ಪ್ರಶಸ್ತಿಯನ್ನು ಕೊಡುವಂಥ ಸಂದರ್ಭದಲ್ಲಿ ಇದನ್ನು ಇಟ್ಟುಕೊಂಡು ನಾನು ಏನಪ್ಪಾ ಮಾಡಲಿಯೆಂದು ಅವರು ಬಾಯಿಬಿಟ್ಟು ಹೇಳುತ್ತಿದ್ದರು. ಸರ್ಕಾರ ಏನಾದರೂ ಆರ್ಥಿಕ ಶಕ್ತಿಯನ್ನು ಕೊಟ್ಟರೆ, ಇನ್ನು

ನಾವು ನಾಲ್ಕು ದಿವಸಗಳ ಕಾಲ ನಮ್ಮ ಆರೋಗ್ಯವನ್ನು ಕಾಪಾಡಿಕೊಂಡು ಜೀವನವನ್ನು ಮಾಡಬಹುದು, ನಾವು ನಮ್ಮ ಕಲೆಯನ್ನು ಪ್ರದರ್ಶನ ಮಾಡಬಹುದೆಂಬ ಒಂದು ರೀತಿಯ ಅನಿವಾರ್ಯತೆಯ ಮಾತನ್ನು ಹೇಳುತ್ತಿದ್ದರು. ಇದನ್ನು ಗಮನಿಸಿ ಈ ರೀತಿ ಸೇವೆ ಮಾಡಿದಂಥ ಯಾವುದೇ ಕಲಾವಿದರು ಇರಬಹುದು, ಅದು ರಂಗಭೂಮಿಯ ಕಲಾವಿದರು ಇರಬಹುದು, ಚಲನಚಿತ್ರ ಕಲಾವಿದರು ಇರಬಹುದು, ಅದು ಯಾರೇ ಆಗಿರಲಿ, ಅವರಿಗೆ ಸರ್ಕಾರ ಒಂದು ಶಾಶ್ವತವಾದಂಥ ಆರ್ಥಿಕ ಭದ್ರತೆಯನ್ನು ಅವರಿಗೆ ಮತ್ತು ಅವರ ಕುಟುಂಬದವರಿಗೆ ಕೊಡುವಂಥ ಪ್ರಯತ್ನವನ್ನು ಮಾಡಬೇಕೆಂಬ ಮಾತನ್ನು ಹೇಳುತ್ತೇನೆ. ಅದೇ ರೀತಿಯಲ್ಲಿ ಶ್ರೀಮತಿ ಚಿಂದೋಡಿ ಲೀಲಾರವರು ಮತ್ತು ಶ್ರೀ ಬಿ.ವಿ. ವೈಕುಂಠರಾಜುರವರು ಅವರವರ ರಂಗಗಳಲ್ಲಿ ತುಂಬಾ ಕೆಲಸಗಳನ್ನು ಮಾಡಿದ್ದಾರೆ. ಅವರಿಗೂ ಕೂಡ ನಾನು ಸಂತಾಪವನ್ನು ಸೂಚಿಸುತ್ತಿದ್ದೇನೆ. ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕೆ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ದಿವಂಗತರಾದ ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿಯಾಗಿದ್ದ ಶ್ರೀ ಜ್ಯೋತಿಬಸು, ವಿಧಾನ ಸಭೆಯ ಮಾಜಿ ಸದಸ್ಯರುಗಳಾಗಿದ್ದ ಶ್ರೀ ಶಂಕರಶೆಟ್ಟಿ ಪಾಟೀಲ್, ಶ್ರೀ ಶಿವಶೇಖರಪ್ಪಗೌಡ ಶಿರವಾಳ್, ಮಾಜಿ ಸಂಸದರಾಗಿದ್ದ ಶ್ರೀ ಬಿ.ಪಿ.ಕದಂ, ಕನ್ನಡ ಚಲನಚಿತ್ರದ ಪೋಷಕ ನಟರಾಗಿದ್ದ ಶ್ರೀ ಕೆ.ಎಸ್.ಅಶ್ವಥ್ ಮತ್ತು ರಂಗಭೂಮಿ ನಟಿಯಾಗಿದ್ದ ಶ್ರೀಮತಿ ಚಿಂದೋಡಿ ಲೀಲಾ ಹಾಗೂ ಖ್ಯಾತ ಪತ್ರಕರ್ತರಾಗಿದ್ದ ಶ್ರೀ ಬಿ.ವಿ.ವೈಕುಂಠರಾಜುರವರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು : ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿ ಕೊಡಲಾಗುವುದು.

ಅಧ್ಯಕ್ಷರು : ಈಗ ವರದಿಗಳನ್ನೊಪ್ಪಿಸುವುದು.